ಒಟ್ಟು ಪ್ರಶ್ನೆಗಳ ಸಂಖ್ಯೆ : 52 ]
**Total No. of Questions : 52 ]**

**Sl. No. :**

| ನೋಂದಣಿ ಸಂಖ್ಯೆ : Registration No. : | | | | | | | | | | | |
|---|---|---|---|---|---|---|---|---|---|---|---|

ವಿಷಯ ಸಂಕೇತ / **Subject Code** **01**

# ಕನ್ನಡ / KANNADA

ಸಮಯ : 3 ಗಂಟೆಗಳು ] [ ಗರಿಷ್ಠ ಅಂಕಗಳು : 80

**Time : 3 Hours ]** **[ Max. Marks : 80**

---

**ಸೂಚನೆ :**

"ಅ–ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ – ವಿಭಾಗ

ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ :

$10 \times 1 = 10$

1. ಯಾವುದರಿಂದ ಪರಿಮಳವನ್ನು ಅರಿಯಬಹುದು ?

   (ಅ) ಗಿಡದಿಂದ (ಆ) ಪುಷ್ಪದಿಂದ

   (ಇ) ಮರದಿಂದ (ಈ) ಫಲದಿಂದ

2. ಅಣ್ಣನಾಜ್ಞೆಯಲಿ ಭ್ರಮಿತನಾದವನು ಯಾರು ?

   (ಅ) ಧರ್ಮರಾಯ (ಆ) ಭೀಮ

   (ಇ) ಅರ್ಜುನ (ಈ) ಸಹದೇವ

3. ಹಗೆಯನ್ನು ಏನೆಂದು ಉಪೇಕ್ಷಿಸಬಾರದು ?

(ಅ) ಸ್ನೇಹಿತನೆಂದು (ಆ) ವೀರನೆಂದು

(ಇ) ಶತ್ರುವೆಂದು (ಈ) ಬಾಲಕನೆಂದು

4. ತತ್ವಜ್ಞಾನವನ್ನು ಕೇಳದವರು

(ಅ) ಘೋರ ಪಾಪಿಗಳು (ಆ) ಸುಜನರು

(ಇ) ಬುದ್ಧಿವಂತರು (ಈ) ದಡ್ಡರು

5. ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ

ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ

– ಈ ಪದ್ಯಭಾಗದಲ್ಲಿ 'ಅಂಗಡಿಯ ಕದವ' ತೆರೆಯುವುದು ಎಂದರೆ.

(ಅ) ಮುಚ್ಚಿರುವ ಅಂಗಡಿಯನ್ನು ಪುನರಾರಂಭಿಸುವುದು

(ಆ) ಜೀವನ ಎಂಬ ವ್ಯಾಪಾರವನ್ನು ಮಾಡದಿರುವುದು

(ಇ) ಬದುಕು ಎಂಬ ವ್ಯಾಪಾರವನ್ನು ದುಡಿಸಿಕೊಳ್ಳುವುದು

(ಈ) ಅಂಗಡಿಯನ್ನು ತೆರೆದು ವ್ಯಾಪಾರ ಮಾಡುವುದು

6. ನಾಗರಿಕತೆಯ ಉನ್ನತಿಯ ಆದರ್ಶದೊಡನೆ ಆರಂಭವಾಗುವ ಅಭಿವೃದ್ಧಿಯು ಏನಾಗುತ್ತದೆ ?

(ಅ) ದೂರದೃಷ್ಟಿ ಒಳನೋಟವಿರುವ ಅಭಿವೃದ್ಧಿಯಾಗಿರುತ್ತದೆ

(ಆ) ಮನುಕುಲದ ಪತನಕ್ಕೆ ಕಾರಣವಾಗುತ್ತದೆ

(ಇ) ಮಾನವ ಸಾಮರ್ಥ್ಯಕ್ಕೆ ದಕ್ಕಿದ ವಿಜಯ ಪತಾಕೆಯಾಗಿರುತ್ತದೆ

(ಈ) ಸದೃಢ ಆರ್ಥಿಕತೆಗೆ ಸಹಕಾರಿಯಾಗಿದೆ

7. ಶೇಷನು ರಾಮಾಯಣದ ಕತೆಯನ್ನು ಯಾರಿಗೆ ಹೇಳಿದನು ?

(ಅ) ಮುದ್ದಣ (ಆ) ಭೋಜರಾಜ

(ಇ) ವಾತ್ಸಾಯನ (ಈ) ಮನೋರಮೆ

8. ಆನೆಯ ಮಾವುತನ ಹೆಸರೇನು ?

(ಅ) ಶಿವೇಗೌಡ (ಆ) ಕೃಷ್ಣೇಗೌಡ

(ಇ) ದುರ್ಗಪ್ಪ (ಈ) ವೇಲಾಯುಧ

9. ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು ?

(ಅ) ವಿದ್ಯುತ್ ಇಲಾಖೆ (ಆ) ಅರಣ್ಯ ಇಲಾಖೆ

(ಇ) ಮುನ್ಸಿಪಾಲಿಟಿ (ಈ) ಪಿ.ಡಬ್ಲ್ಯೂ.ಡಿ.

10. "ಹಾಗಂತ ಹೇಳಿಕೆ ಬರ್ಕೊಡ್ತೀಯಾ ? ಹಾಗಿದ್ರೆ ಹೇಳು. ಅದ್ನೂ ಎಳಕೊಂಡು ಬಂದು ಅಂಬಾಸಿಡರ್ ಕಾರಿನ ಜೊತೆ ಕಟ್ಟಾಕಿ ಬರೆ ಹಾಕಿ ಬಿಡ್ತೀನಿ, ನಿನ್ನ ಪುಕಾರೇನಿದ್ರೂ ಬರ್‍ವಣಿಗೇಲಿ ಇರಬೇಕು. ಹಂಗಿದ್ರೆ ಮಾತ್ರ ನಾನು ಆಕ್ಷನ್ ತಗೊಳ್ಳೋದು" – ನಾಗರಾಜನ ಈ ಮಾತುಗಳಲ್ಲಿ ವ್ಯಕ್ತವಾಗುವ ಭಾವ.

(ಅ) ಕೃಷ್ಣೇಗೌಡರ ಮೇಲೆ ಅಸಹನೆ

(ಆ) ವೈರಿ ಇಲಾಖೆಗಳ ಮೇಲಿನ ಕೋಪ

(ಇ) ವೇಲಾಯುಧನ ಮೇಲೆ ಸಿಟ್ಟು

(ಈ) ದೂರು ದಾಖಲೆಗಳಲ್ಲಿರಬೇಕೆಂದು ಇರಾದೆ

ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ : 5 × 1 = 5

(ಕಾಫಿ, ಕುದುಪ, ಸೀತಾ, ಚಹಾ, ತಬ್ಬಲಿ, ಚೆನ್ನೈ)

11. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ .................. ನೆನಪಾಗುತ್ತದೆ.

12. ಕನ್ನಡಿಗರು ತಮ್ಮ ರಾಜ್ಯದಲ್ಲಿ ತಾವೇ ..................ಗಳಾಗುತ್ತಿದ್ದಾರೆ.

13. ಕಲಾಂ ಅವರು ರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಅವರು ..................ನಲ್ಲಿದ್ದರು.

14. ಧಣಿಗಳು ಹೊಳೆಯ ಹೂಳೆತ್ತಲು ..................ನಿಗೆ ಸೂಚಿಸಿದರು.

15. ಕಲಿಯುಗದ ಅಮೃತ .................. .

ಇ) 16. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ : 5 × 1 = 5

| | | | |
|---|---|---|---|
| (ಅ) | ಕೀರ್ತನೆ | 1) | ಚಿಟ್ಟೆ ಮತ್ತು ಜೀವಯಾನ |
| (ಆ) | ಜನಪದ | 2) | ಒಂದು ಹೂ ಹೆಚ್ಚಿಗೆ ಇಡುತೀನಿ |
| (ಇ) | ಸುಕನ್ಯಾ ಮಾರುತಿ | 3) | ತೆರೆದ ದಾರಿ |
| (ಈ) | ಟಿ. ಯಲ್ಲಪ್ಪ | 4) | ಒಮ್ಮೆ ನಗುತ್ತೇವೆ |
| (ಉ) | ಲಲಿತಾ ಸಿದ್ಧ ಬಸವಯ್ಯ | 5) | ಪುರಂದರದಾಸರು |
| | | 6) | ಹಬ್ಬಲಿ ಅವರ ರಸಬಳ್ಳಿ |

## ಆ – ವಿಭಾಗ

ಅ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 3 × 2 = 6

17. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ ?

18. ಹಿತ್ತಾಳೆಗಿಂತ ಬಲುಹೀನ ಯಾವುದು ?

19. ಬೇಂದ್ರೆ ಕವಿಯ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು ?

20. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು ?

ಆ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 2 × 2 = 4

21. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು ?

22. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು ?

23. ಅಬ್ದುಲ್ ಕಲಾಂ ಅವರ ಬದುಕಿನ ಮಂತ್ರ ಯಾವುದು ?

24. ಪಟ್ಟಣದ ಹೊಟೇಲಿನ ಕಟ್ಟಡ ಹೇಗಿದೆ ?

ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

25. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?

26. ಕಾಡಾನೆಗಳ ಹಾವಳಿಗೆ ಪ್ರಕಾಶ ನೀಡಿದ ಕಾರಣಗಳೇನು ?

27. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು ?

28. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ ?

## ಇ – ವಿಭಾಗ

ಅ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : $2 \times 3 = 6$

29. ಅಸಾಧ್ಯಮಪ್ಪ ಮರುವಕ್ಕಮಿಲ್ಲ.

30. ಪಗೆಯಂ ಬಾಲಕನೆಂಬರೆ.

31. ಯಾತನೆಗೂ ನಲ್ವಾತನೇ ನುಡಿವ ಮುಖಮುದ್ರೆ.

ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : $1 \times 3 = 3$

32. ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದವು.

33. ಮತ್ತೆ ಅವರಿಗೆ ಮೂತ್ರಪಿಂಡದ ಕಲ್ಲು ಕಾಣಿಸಿರಲಿಲ್ಲ.

34. ಪದ್ಯಂ ವಧ್ಯಂ : ಗದ್ಯಂ ಹೃದ್ಯಂ.

ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : $1 \times 3 = 3$

35. 'ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದಹಾಗೆ.'

36. "ಆನೆ ಬೇಲಿ ದಾಟಿ ಹೋಯ್ತು ಸಾರ್."

## ಈ - ವಿಭಾಗ

ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

37. ರಾವಣನಲ್ಲಿ ಕಂಡು ಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾರೆ ? ವಿವರಿಸಿರಿ.

38. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು ? ವಿವರಿಸಿರಿ.

39. ತಂದೆ-ತಾಯಿಗಳು ಮಗುವಿಗೆ ಗೋಚರಿಸುವ ಬಗೆಯನ್ನು ಮುಂಬೈ ಜಾತಕ ಕವಿತೆಯಲ್ಲಿ ಹೇಗೆ ಚಿತ್ರಿಸಿದ್ದಾರೆ ?

40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಯಿಸಿಕೊಂಡು ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ :

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು.
ಏರಿ ನೀರುಂಬಡೆ, ಬೇಲಿಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ.

ಅ) ಯಾವಾಗ ನಿಲಬಹುದು ? (1 ಅಂಕ)

ಆ) ಯಾವಾಗ ನಿಲಲಾಗದು ? (1 ಅಂಕ)

ಇ) ಮೇಲಿನ ವಚನದ ಹಿನ್ನಲೆಯಲ್ಲಿ ರಕ್ಷಕರೇ ಭಕ್ಷಕರಾದಾಗ ಒದಗುವ ವಿಘಟನೆಯನ್ನು ವಿಶ್ಲೇಷಿಸಿರಿ. (2 ಅಂಕ)

ಆ) ಯಾವುದಾದರೂ **ಒಂದು** ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $1 \times 4 = 4$

41. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು ? ತಿಳಿಸಿರಿ.

42. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿರಿ.

ಇ) ಯಾವುದಾದರೂ **ಒಂದು** ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $1 \times 4 = 4$

43. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ಹಾಗೂ ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು ? ವಿವರಿಸಿರಿ.

44. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು ? ವಿಶ್ಲೇಷಿಸಿರಿ.

## ಉ – ವಿಭಾಗ

## (ಭಾಷಾಭ್ಯಾಸ)

ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಸೂಚನೆಗೆ ಅನುಗುಣವಾಗಿ ಉತ್ತರಿಸಿ : $4 \times 2 = 8$

45. ಕೆಳಗಿನ **ಎರಡು** ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ :

    ಧರೆ, ಸುತ, ಪುಷ್ಪ.

46. ಕೆಳಗಿನ **ಎರಡು** ಕ್ರಿಯಾಪದಗಳ 'ಧಾತು' ಗುರುತಿಸಿ :

    ಬರುತ್ತಾಳೆ, ತಿನ್ನುವುದಿಲ್ಲ, ಹೋದನು.

47. ಕೆಳಗಿನ **ಎರಡು** ಪದಗಳ ಗುಣವಾಚಕಗಳನ್ನು ಗುರುತಿಸಿ, ಬರೆಯಿರಿ :

    ಹಿತವಚನ, ಕಲಿಭೀಮ, ಹುಸಿನಿದ್ದೆ.

48. ಕೆಳಗಿನ **ಎರಡು** ಪದಗಳ ವಿಭಕ್ತಿಯನ್ನು ಹೆಸರಿಸಿ :

    ಮೊಮ್ಮಗಳನ್ನು, ಹರೆಯಕ್ಕೆ, ಧರೆಯೊಳ್.

49. ಕೆಳಗಿನ **ಎರಡು** ಪದಗಳಿಗೆ 'ತದ್ಭವ' ರೂಪವನ್ನು ಬರೆಯಿರಿ :

    ಘೂಕ, ಮುಖ, ಶಿರ.

50. ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

ಆ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ : $1 \times 4 = 4$

51. ತ್ಯಾಜ್ಯ ವಸ್ತುಗಳ ಮರುಬಳಕೆಯ ಅಗತ್ಯ.

    **ಅಥವಾ**

    ವಿದ್ಯಾರ್ಥಿ ಜೀವನದಲ್ಲಿ ಪುಸ್ತಕಗಳ ಮಹತ್ವ.

ಇ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪತ್ರ ಬರೆಯಿರಿ : $1 \times 4 = 4$

52. ಹರ್ಷವರ್ಧನ / ಹರ್ಷಿತ, ದ್ವಿತೀಯ ಪಿಯುಸಿ, ನಳಂದ ಪದವಿ ಪೂರ್ವ ಕಾಲೇಜು, ಕಾವಳಪಡೂರು, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ತಿಳಿದು, ಪ್ರಿಯವರ್ಧನ / ಪ್ರಿಯಾಂಕ, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಬೇಲೂರು ರಸ್ತೆ, ಚಿಕ್ಕಮಗಳೂರು ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ / ಗೆಳತಿಗೆ ಪ್ರವಾಸಕ್ಕೆ ಹೋಗಿ ಬಂದ ಅನುಭವವನ್ನು ಕುರಿತು ಪತ್ರ ಬರೆಯಿರಿ.

**ಅಥವಾ**

ಜಯವರ್ಧನ / ಜಯಶ್ರೀ, ದ್ವಿತೀಯ ಪಿಯುಸಿ, ಪ್ರತಿಭಾ ಪದವಿ ಪೂರ್ವ ಕಾಲೇಜು, ಇಂಡಿ, ವಿಜಯಪುರ ಜಿಲ್ಲೆ ಇದು ನಿಮ್ಮ ವಿಳಾಸ ಎಂದು ತಿಳಿದು, ಇಂಡಿಯಲ್ಲಿರುವ ಕೆನರಾ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನಿಮ್ಮ ಉಳಿತಾಯ ಖಾತೆಯನ್ನು ತೆರೆಯುವಂತೆ ಕೋರಿ ಪತ್ರ ಬರೆಯಿರಿ.

| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

**E 1 – 2025**

| ವಿಷಯ ಸಂಕೇತ Subject Code | 01 |
|---|---|

# ಕನ್ನಡ / KANNADA

**ಸಮಯ: 3 ಗಂಟೆ 00 ನಿಮಿಷಗಳು]** **(ಒಟ್ಟು ಪ್ರಶ್ನೆಗಳ ಸಂಖ್ಯೆ : 52)** **ಗರಿಷ್ಠ ಅಂಕಗಳು: 80**

**Time : 3 Hours 00 Minutes]** **[Total No. of Questions : 52]** **[Max. Marks : 80**

**ಸೂಚನೆ :**

1. **ಅ–ವಿಭಾಗ**ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ–ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ: **(10 × 1 = 10)**

1) ಮಯತನೂಜೆ ಎಂದರೆ ಯಾರು?

(a) ದ್ರೌಪದಿ (b) ಸೀತೆ
(c) ಮಂಡೋದರಿ (d) ಊರ್ಮಿಳೆ

2) ಬಸುರ ಬಗೆವೆನು ಕೀಚಕನ ನಸು
ಮಿಸುಕಿದೊಡೆ ವೈರಾಟ ವಂಶದ
ಹೆಸರ ತೊಡೆವೆನು ನಮ್ಮನರಿದೊಡೆ ಕೌರವವ್ರಜವ
ಕುಸುರಿದರಿವೆನು – ಈ ಪದ್ಯಭಾಗದಲ್ಲಿ ಭೀಮನ ಮಾತಿನ ಅರ್ಥವೇನು?

(a) ಭೀಮನ ಹುಸಿಕೋಪ (b) ಭೀಮನ ಪ್ರತೀಕಾರದ ಪ್ರತಿಜ್ಞೆ
(c) ಭೀಮನ ಉದಾಸೀನತೆ (d) ಭೀಮನ ಅಸಹಾಯಕತೆ

3) ಯಾವ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ?

(a) ಭಿನ್ನಾಣದ ಮಾತಿಗೆ (b) ಕೊಂಕು ಮಾತಿಗೆ
(c) ಪ್ರೀತಿಯ ಮಾತಿಗೆ (d) ನಾಜೂಕಿನ ಮಾತಿಗೆ

4) ಹುಸಿನಿದ್ದೆ ಸಾಕು ಎಂದು ಕವಿ ಯಾರಿಗೆ ಹೇಳಿದ್ದಾರೆ?

(a) ಮುದುಕರಿಗೆ (b) ಹೆಂಗಸರಿಗೆ
(c) ಗಂಡಸರಿಗೆ (d) ಮಕ್ಕಳಿಗೆ



01 Kannada 01-2025.indd 1 06-02-2025 10:43:50

5) ಲಕ್ಷದಾರಿಗಳ ಚದುರಂಗದಾಟ ಯಾವುಉದು?

(a) ವ್ಯಾಪಾರ (b) ಜೀವನ

(c) ವಿದ್ಯೆ (d) ಅಲೆದಾಟ

6) "ನಮ್ಮ ಭಾರತದಲ್ಲಿ ಎಷ್ಟು ಜನ ಹೆಣ್ಣುಮಕ್ಕಳಿಗೆ ಓದೋ ಅವಕಾಶ ಸಿಗುತ್ತೆ ಹೇಳು" ಎಂದು ನಿರೂಪಕಿಯು ಗೆಳತಿ ಸೀತಾಳಿಗೆ ಹೇಳಿದ ಮಾತಿನ ಆಶಯವೆಂದರೆ:

(a) ಓದಿನ ಅವಕಾಶವನ್ನು ಹೆಣ್ಣುಮಕ್ಕಳು ಸರಿಯಾಗಿ ಬಳಸಿಕೊಳ್ಳಬೇಕು.

(b) ಹೆಣ್ಣುಮಕ್ಕಳಿಗೆ ಓದಿಗೆ ಅವಕಾಶ ಸಿಗಬಾರದೆಂಬುದು.

(c) ಹೆಣ್ಣುಮಕ್ಕಳ ಓದಿಗೆ ತುಂಬಾ ಅವಕಾಶವಿದೆ.

(d) ಓದನ್ನು ಹೆಣ್ಣುಮಕ್ಕಳು ಗಂಭೀರವಾಗಿ ಭಾವಿಸಬಾರದು.

7) ಕಲಾಂ ಅವರು ರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಎಲ್ಲಿದ್ದರು?

(a) ಹೈದರಾಬಾದ್ (b) ಸಿಕಂದರಾಬಾದ್

(c) ಚೆನ್ನೈ (d) ಅಣ್ಣಾಮಲೈ

8) ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು?

(a) ಫಾರೆಸ್ಟ್ ಡಿಪಾರ್ಟ್‌ಮೆಂಟ್ (b) ಪೋಲೀಸ್ ಡಿಪಾರ್ಟ್‌ಮೆಂಟ್

(c) ಪೋಸ್ಟಲ್ ಡಿಪಾರ್ಟ್‌ಮೆಂಟ್ (d) ಟೆಲಿಫೋನ್ ಡಿಪಾರ್ಟ್‌ಮೆಂಟ್

9) "ಇದ್ದಿದ್ದನ್ನು ನಡೆಸ್ಕೊಂಡು ಹೋಗೋದೆ ಕಷ್ಟ ಆಗಿದೆ. ಜನಗಳ ವಿಶ್ವಾಸನೂ ಉಳಿಸ್ಕೊಂಡು, ಕುರ್ಚೀನೂ ಉಳಿಸಿಕೊಂಡು ಟರ್ಮು ಮುಗಿಸಿದರೆ ಸಾಕಾಗಿದೆ ನನಗೆ". – ಖಾನ್‌ಸಾಹೇಬರ ಈ ಮಾತುಗಳ ಅರ್ಥವೇನು?

(a) ಪದವಿ ಉಳಿಸಿಕೊಂಡರೆ ಸಾಕೆಂಬ ಭಾವ

(b) ಅಧಿಕಾರ ಲಾಲಸೆ ಇಲ್ಲದ ಧೋರಣೆ

(c) ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂಬ ಆಸೆ

(d) ವಿರೋಧಪಕ್ಷದವರ ಬಗ್ಗೆ ಭಯ

10) ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ ?

(a) ಶಿವೇಗೌಡರ ಸಾಮಿಲ್ಲಿನಲ್ಲಿ (b) ಸುಬ್ಬಣ್ಣನ ಮನೆಯ ಹಿತ್ತಲಿನಲ್ಲಿ

(c) ಅರಣ್ಯ ಇಲಾಖೆಯಲ್ಲಿ (d) ಶಿಕಾರಿ ಗಂಡಿಯಲ್ಲಿ

(ಆ) ಬಿಟ್ಟ ಸ್ಥಳಗಳನ್ನು ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(5 × 1 = 5)**

(ರಾಮಚಂದ್ರ, ಚಿನ್ನಮ್ಮನಿಗೆ, ವೃದ್ಧರಿಗೆ, ದ್ವೀಪಜೀವಿ, ಕುದುಪನಿಗೆ, ಕಾರ್ವೆರ್ ಮಾರ್ಷ್)

11) ವಾಲ್‌ಪಾರೈಗೆ ಬಂದ ಬ್ರಿಟೀಷ್ ಪ್ರಜೆ ______________

12) ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು______________ಆಗುತ್ತಾರೆ.

13) ಧಣಿಗಳು ಹೊಳೆಯ ಹೂಳೆತ್ತಲು ______________ ಸೂಚಿಸಿದರು.

14) ವಸುಧೆಗೆ ಒಡೆಯನೆನಿಸಿದವನು ______________

15) ಬಾಯಿಚಪಲ ______________ ಜಾಸ್ತಿ ಇರುತ್ತದೆ.

(ಇ) 16) ಹೊಂದಿಸಿ ಬರೆಯಿರಿ: **(5 × 1 = 5)**

| | | | |
|---|---|---|---|
| ಅ) | ವಚನಗಳು | 1) | ಕೆ.ಎಸ್. ನಿಸಾರ್ ಅಹಮದ್ |
| ಆ) | ಜಾಲಿಯ ಮರದಂತೆ | 2) | ಚಿಟ್ಟೆ ಮತ್ತು ಜೀವಯಾನ |
| ಇ) | ಶಿಲುಬೆ ಏರಿದ್ದಾನೆ | 3) | ಬಿ. ಸುಕನ್ಯಾ ಮಾರುತಿ |
| ಈ) | ಹತ್ತಿ… ಚಿತ್ತ… ಮತ್ತು…. | 4) | ಬಸವಣ್ಣ |
| ಉ) | ಒಮ್ಮೆ ನಗುತ್ತೇವೆ | 5) | ಲಲಿತಾ ಸಿದ್ಧಬಸವಯ್ಯ |
| | | 6) | ಕೀರ್ತನೆ |

**ಆ–ವಿಭಾಗ**

II. (ಅ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(3 × 2 = 6)**

17) ಸೀತೆಯ ತಲ್ಲಣಕ್ಕೆ ಕಾರಣವೇನು?

18) ಹೆಂಡತಿಯ ಹಂಬಲಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?

19) ಬೆಳಕು–ಬೇಟೆಗಾರ ಹೇಗೆ ಬರುತ್ತಾನೆ?

20) ಶಿಲುಬೆಗೇರಿದ ಏಸುವಿನ ದೇಹ ಯಾರಿಗೆ, ಏನನ್ನು ಅನ್ನುವಂತಿದೆ?

(ಆ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(2 × 2 = 4)**

21) ಹೆಂಡ್ತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?

22) ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

23) ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ?

24) ಪಟ್ಟಣದ ಹೊಟೇಲಿನ ಕಟ್ಟಡ ಹೇಗಿದೆ?

(ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(3 × 2 = 6)**

25) ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

26) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?

27) ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು?

28) ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

**ಇ–ವಿಭಾಗ**

III. (ಅ) ಯಾವುದಾದರೂ **ಎರಡು** ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(2 × 3 = 6)**

29) ಬಂಗಾರ ನಿನಗೆ ಸ್ಥಿರವಲ್ಲ .

30) ಕುಳಿತು ಕೆಮ್ಮುವ ಪ್ರಾಣಿ

31) ‘ಎಷ್ಟುಸಲವಮ್ಮ ಹೇಳುವುದು ನಿನಗೆ?’

(ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

32) ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ!

33) “ನೋಡು ನಿನ್ನ ಎದುರು ಎರಡು ಆಯ್ಕೆಗಳಿವೆ”

34) ಪದ್ಯಂ ವದ್ಯಂ; ಗದ್ಯಂ ಹೃದ್ಯಂ

(ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

35) ವೆಪನ್ ಸಾರ್, ವೆಪನ್ ನಮಗೆ ಮುಖ್ಯ.

36) ಆನೆ ಬೇಲಿ ದಾಟಿ ಹೋಯ್ತು ಸಾರ್.

**ಈ–ವಿಭಾಗ**

IV. (ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿರಿ : **(2 × 4 = 8)**

37) ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.

38) ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

39) ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿರಿ.

40) ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೆಂ ಮುಪ್ಪಿನಲ್ಲಾಗದಾ।
ಒಣಗಲ್ಪೈರಿಗೆ ಬಾರದಿರ್ದ ಮಳೆ ತಾಂ ಬಂದೇನಾಪತ್ತಿನೊಳ್॥

ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ।
ತೃಣವೇ ಪರ್ವತವಲ್ಲವೇ ಹರಹರಾ ಶ್ರೀಚೆನ್ನಸೋಮೇಶ್ವರಾ॥

ಅ) ಈ ಪದ್ಯದ ಕವಿಯ ಅಂಕಿತ ಯಾವುದು? (1 ಅಂಕ)

ಆ) ಮಳೆ ಯಾವಾಗ ಬಂದರೆ ಉಪಯುಕ್ತ? (1 ಅಂಕ)

ಇ) ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು (2 ಅಂಕ)

(ಆ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿರಿ: **(1 × 4 = 4)**

41) ಕಣ್ಣುನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು?

42) ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

(ಇ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ: **(1 × 4 = 4)**

43) ಎಲ್ಲರ ನೀರಿಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು?

44) ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

**ಉ–ವಿಭಾಗ**

**ಭಾಷಾಭ್ಯಾಸ**

V. (ಅ) ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಸೂಚನೆಗೆ ಅನುಗುಣವಾಗಿ ಉತ್ತರಿಸಿ: **(4 × 2 = 8)**

45) ಯಾವುದಾದರೂ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.

ಕಲಿ, ನೆರೆ, ಬಟ್ಟೆ

46) ಯಾವುದಾದರೂ ಎರಡು ಪದಗಳಿಗೆ ಗುಣವಾಚಕಗಳನ್ನು ಗುರುತಿಸಿ ಬರೆಯಿರಿ.

ಮಂಗಳ ಲಿಂಗ, ಹಿತವಚನ, ಹಾಡುಹಕ್ಕಿ

47) ಯಾವುದಾದರೂ ಎರಡು ಕ್ರಿಯಾಪದಗಳ ಧಾತು ಗುರುತಿಸಿ.

ಹಾಡುವಳು, ಬರುತ್ತಾರೆ, ಓದಿದರು

48) ಯಾವುದಾದರೂ ಎರಡು ಕ್ರಿಯಾಪದಗಳ ಕಾಲಸೂಚಕಗಳನ್ನು ಬರೆಯಿರಿ.

ಕಟ್ಟುವರು, ನೋಡಿದಳು, ಕೇಳುತ್ತಾನೆ

49) ಯಾವುದಾದರೂ ಎರಡು ಪದಗಳಿಗೆ ತದ್ಭವ ರೂಪ ಬರೆಯಿರಿ.

ವೀರ, ದೃಷ್ಟಿ, ಮುಖ

50) ದ್ವಿರುಕ್ತಿಗಳಿಗೆ ಯಾವುದಾದರೂ ಎರಡು ಉದಾಹರಣೆ ಕೊಡಿ.

(ಆ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ: **(1 × 4 = 4)**

51) ಹೆಚ್ಚುತ್ತಿರುವ ವೃದ್ಧಾಶ್ರಮಗಳು

**ಅಥವಾ**

ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವ ಮಾರ್ಗಗಳು



01 Kannada 01-2025.indd 6 06-02-2025 10:43:50

(ಇ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪತ್ರ ಬರೆಯಿರಿ: **(1 × 4 = 4)**

52) ಸುದೀಪ್ / ಸುನೀತ, ದ್ವಿತೀಯ ಪಿಯುಸಿ, ವಿದ್ಯೋದಯ ಪದವಿ ಪೂರ್ವ ಕಾಲೇಜು. ಜೆ.ಪಿ. ನಗರ, ಬೆಂಗಳೂರು – ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ರವಿ/ರಜನಿ, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಸದಾಶಿವನಗರ, ತುಮಕೂರು – ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಕಾಲೇಜಿನಲ್ಲಿ ಕೈಗೊಂಡ ಪ್ರವಾಸದ ಅನುಭವವನ್ನು ಕುರಿತು ಪತ್ರ ಬರೆಯಿರಿ.

**ಅಥವಾ**

ಪ್ರಶಾಂತ/ಅಂಜಲಿ, ದ್ವಿತೀಯ ಪಿಯುಸಿ, ಜೈನ್ ಪದವಿ ಪೂರ್ವ ಕಾಲೇಜು, ರಾಜಾಜಿನಗರ, ಬೆಂಗಳೂರು – ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ವ್ಯವಸ್ಥಾಪಕರು, ಭಾರತೀಯ ಸ್ಟೇಟ್ ಬ್ಯಾಂಕ್, ರಾಜಾಜಿನಗರ ಶಾಖೆ, ಬೆಂಗಳೂರುರವರಿಗೆ ಶೈಕ್ಷಣಿಕ ಸಾಲ ಸೌಲಭ್ಯ ಕೋರಿ ಪತ್ರ ಬರೆಯಿರಿ.

01 Kannada 01-2025.indd 8 06-02-2025 10:43:50

| ನೋಂದಣಿ ಸಂಖ್ಯೆ<br>Registration No: | | | | | | | | | | | |
|---|---|---|---|---|---|---|---|---|---|---|---|

H2 – 2025

ವಿಷಯ ಸಂಕೇತ
Subject Code **01**

# ಕನ್ನಡ / KANNADA

ಸಮಯ: 3 ಗಂಟೆ 00 ನಿಮಿಷಗಳು] (ಒಟ್ಟು ಪ್ರಶ್ನೆಗಳ ಸಂಖ್ಯೆ : 52) ಗರಿಷ್ಠ ಅಂಕಗಳು: 80

Time : 3 Hours 00 Minutes] [Total No. of Questions : 52] [Max. Marks : 80

**ಸೂಚನೆ :**

1. **"ಅ–ವಿಭಾಗ"**ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ–ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10 × 1 = 10)**

01

1) ಸೀತೆಯನ್ನು ರಾವಣ ಇಲ್ಲಿ ಇರಿಸಿದ್ದನು.

(ಅ) ಶಾಂತಿವನ (ಆ) ಪ್ರಮದವನ

(ಇ) ಅಶೋಕವನ (ಈ) ನಂದನವನ

2) ಬಸವಣ್ಣನವರ ವಚನಗಳ ಅಂಕಿತ ಯಾವುದು?

(ಅ) ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ (ಆ) ಹರಹರಾ ಶ್ರೀಚೆನ್ನಸೋಮೇಶ್ವರಾ

(ಇ) ಕೂಡಲ ಸಂಗಮದೇವಾ (ಈ) ಗುಹೇಶ್ವರಾ

3) "ಎಲ್ಲರೊಳು ಕಲಿಭಿಮನೆ ಮಿಡುಕುಳ್ಳ ಗಂಡನು, ಹಾನಿ ಹರಿಬಕೆ ನಿಲ್ಲದಂಗೈಸುವನು, ಕಡು ಹೀಹಾಳಿಯುಳ್ಳವನು" – ಈ ಪದ್ಯ ಭಾಗದಲ್ಲಿ ಭೀಮನ ಬಗೆಗೆ ದ್ರೌಪದಿಯ ಮಾತಿನಲ್ಲಿ ವ್ಯಕ್ತವಾಗಿರುವ ಭಾವ ಯಾವುದು?

(ಅ) ಕಷ್ಟಕಾಲದಲ್ಲಿ ರಕ್ಷಿಸುವನೆಂಬ ಭರವಸೆ

(ಆ) ಭೀಮನ ಪರಾಕ್ರಮದ ಬಗ್ಗೆ ಅಪನಂಬಿಕೆ

(ಇ) ಕಷ್ಟಕಾಲದಲ್ಲಿ ನೆರವಿಗೆ ಬರುವುದಿಲ್ಲವೆಂಬ ಭಾವ

(ಈ) ಭೀಮ ಬಲದ ಬಗ್ಗೆ ಶಂಕೆ

4) ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಪುಲಿಗೆರೆ ಸೋಮನಾಥ ಕವಿಯು ಅಭಿಪ್ರಾಯಪಟ್ಟಿದ್ದಾನೆ?

(ಅ) ಮಿತ್ರನೆಂದು (ಆ) ಬಾಲಕನೆಂದು

(ಇ) ದುರ್ಬಲನೆಂದು (ಈ) ಹೇಡಿಯೆಂದು

5) ಜಾಲಿಯ ಮರದಂತೆ ಇರುವವರು ಯಾರು?

(ಅ) ಸುಜನರು (ಆ) ಊರ ಹಂದಿಗಳು

(ಇ) ದುರ್ಜನರು (ಈ) ಡಾಂಬಿಕರು

6) ವಾಲ್‌ಪಾರೈಗೆ ಬಂದ ಬ್ರಿಟಿಷ್ ಪ್ರಜೆ ಯಾರು?

(ಅ) ಪೂಣಚ್ಚಿ (ಆ) ಆದಿವಾಸಿಗಳು

(ಇ) ಕೃಪಾಕರ, ಸೇನಾನಿ (ಈ) ಕಾರ್ವೆರ್ ಮಾರ್ಷ್

7) "ಸುಮ್ಮನೆ ದೂರು ಹೇಳುತ್ತಾ ಕೂರೋ ಬದಲು, ನೀನೇನಾದರೂ ಮಾಡು. ಎಸ್.ಎಸ್.ಎಲ್.ಸಿ. ಕಟ್ಟು. ಟೈಪಿಂಗ್ ಏನಾದರೂ ಕಲಿ……." ಎಂದು ನಿರೂಪಕಿಯು ಗೆಳತಿ ಸೀತಾಗೆ ಹೇಳುವ ಮಾತಿನಲ್ಲಿ ಕಂಡುಬರುವ ಆಶಯ ಯಾವುದು?

(ಅ) ಬದುಕನ್ನು ಬದಲಿಸಿಕೊಳ್ಳಬೇಕೆಂಬ ಸದಾಶಯ.

(ಆ) ಹಣೆಯ ಬರಹವನ್ನು ತಪ್ಪಿಸಲಾಗದೆಂಬ ಹತಾಶೆ.

(ಇ) ಬದುಕು ಬಂದಂತೆ ಸ್ವೀಕರಿಸು ಎಂಬ ಬೋಧೆ.

(ಈ) ಬದುಕು ಅದೃಷ್ಟದ ಆಟವೆಂಬ ನೀತಿ.

8) ಕೃಷ್ಣೇಗೌಡನ ಆನೆಯ ಹೆಸರೇನು?

(ಅ) ಲಕ್ಷ್ಮೀ (ಆ) ಗೌರಿ

(ಇ) ಸರಸ್ವತಿ (ಈ) ಜುಬೇದ

9) ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

(ಅ) ಈ ಆನೆಯಿಂದ ನಾಲ್ಕು ಜನರು ಸಾಯುತ್ತಾರೆ.

(ಆ) ಈ ಆನೆಯು ಕಾಡಿಗೆ ಓಡಿ ಹೋಗುತ್ತದೆ.

(ಇ) ಈ ಆನೆಯಿಂದ ಐದು ಜನರು ಪ್ರಾಣ ಕಳೆದುಕೊಳ್ಳುತ್ತಾರೆ.

(ಈ) ಈ ಆನೆಯು ತನ್ನ ಮಾವುತನನ್ನೇ ಕೊಲ್ಲುತ್ತದೆ.



01 Kannada 04-2025.indd 2 16-04-2025 11:46:32

10) ''ನೋಡಿ ಸಾರ್, ನಿನ್ನೆ ಒಂದು ಹುಚ್ಚುನಾಯಿ ಏಳು ಜನಕ್ಕೆ, ಹತ್ತಾರು ದನಗಳಿಗೆ ಕಚ್ಚಿದೆ. ಅವರಿಗೆಲ್ಲಾ ಎಲ್ಲಿಂದ ಇಂಜೆಕ್ಷನ್ ಸಪ್ಲೈ ಮಾಡೋಕ್ಕಾಗುತ್ತೆ ಹೇಳಿ?'' ಎಂಬ ವೆಟರ್ನರಿ ಸ್ಟಾಕ್‌ಮನ್ ಪುಟ್ಟಯ್ಯನ ಮಾತಿನಲ್ಲಿ ವ್ಯಕ್ತವಾಗಿರುವ ಭಾವ ಯಾವುದು?

(ಅ) ಔಷಧ ಒದಗಿಸಲಾಗದ ಅಸಹಾಯಕತೆ.

(ಆ) ಇಂಜೆಕ್ಷನ್ ಚುಚ್ಚಬೇಕಲ್ಲ ಎಂದು ಬೇಸರ.

(ಇ) ಹುಚ್ಚುನಾಯಿ ಕಡಿತಕ್ಕೊಳಗಾದವರ ಬಗ್ಗೆ ಅನುಕಂಪ.

(ಈ) ಹುಚ್ಚುನಾಯಿ ಕಚ್ಚಿದವರ ಬಗ್ಗೆ ಕೋಪ.

**(ಆ)** ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5 × 1 = 5)**

(ಮಗು, ಮುದ್ದಣ, ಸಿ ಎನ್ ಆರ್ ರಾವ್, ಚಹಾ, ಮನೋರಮೆ, ಶಾಂಭವಿ)

11) ___________ ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದರು.

12) ಧಣಿಗಳ ತೋಟದ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ___________.

13) ___________ ಭೂಮಿಯ ಮೇಲಿನ ಮೊದಲ ವಿಜ್ಞಾನಿ.

14) 'ಕನ್ನಡವು ಕಸ್ತೂರಿಯಲ್ಲವೇ!' ಎಂದವರು ___________.

15) ___________ ಕಲಿಯುಗದ ಅಮೃತವೆಂದು ವೀರೇಂದ್ರ ಸಿಂಪಿಯವರು ಅಭಿಪ್ರಾಯಪಟ್ಟಿದ್ದಾರೆ.

16) **(ಇ)** ಹೊಂದಿಸಿ ಬರೆಯಿರಿ: **(5 × 1 = 5)**

| '**ಅ**' ಪಟ್ಟಿ | '**ಬ**' ಪಟ್ಟಿ |
|---|---|
| (ಅ) ಪುರಂದರ ವಿಠಲ | 1. ಟಿ. ಯಲ್ಲಪ್ಪ |
| (ಆ) ಬೆಳಗುಜಾವ | 2. ಜಿ.ಎಸ್. ಶಿವರುದ್ರಪ್ಪ |
| (ಇ) ಶಿಲುಬೆ ಏರಿದ್ದಾನೆ | 3. ಸುಕನ್ಯಾ ಮಾರುತಿ |
| (ಈ) ಹತ್ತಿ… ಚಿತ್ತ… ಮತ್ತು…. | 4. ದ.ರಾ. ಬೇಂದ್ರೆ |
| (ಉ) ಒಮ್ಮೆ ನಗುತ್ತೇವೆ | 5. ಕೆ.ಎಸ್. ನಿಸಾರ್ ಅಹಮದ್ |
| | 6. ಪುರಂದರದಾಸರು |



01 Kannada 04-2025.indd 3 16-04-2025 11:46:32

## ಆ–ವಿಭಾಗ

II. (ಅ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

17) ರಾವಣನು ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೈಸಿದನು?

18) ಗಂಡರ್ಗೈವರು ಮೂರುಲೋಕದ ಗಂಡರಾರು? ಹೆಸರಿಸಿ.

19) ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಬೇಂದ್ರೆಯವರು ಏನು ಹೇಳಿದ್ದಾರೆ?

20) ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

(ಆ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(2 × 2 = 4)**

21) ಡಾ|| ಚಂದ್ರಪ್ಪನವರು ಬಸಲಿಂಗನ ಬಳಿ ಡಾ|| ತಿಮ್ಮಪ್ಪನವರ ಬಗ್ಗೆ ಹೇಳಿದ ಅಭಿಪ್ರಾಯವೇನು?

22) ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾ.ಮಾ.ನಾ. ಅಪೇಕ್ಷಿಸಿದ್ದಾರೆ?

23) ಕಲಾಂ ಮೇಷ್ಟ್ರು ಹೇಳಿದ "ಯಶಸ್ಸಿನ ಪಂಚಾಕ್ಷರಿ ಮಂತ್ರ" ಯಾವುದು?

24) ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು?

(ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

25) ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?

26) ಸೊರಗಿದ್ದ ಆನೆಯನ್ನು ಕೃಷ್ಣೇಗೌಡನು ಹೇಗೆ ಸಾಕಿದನು?

27) ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದನು?

28) ಅರಣ್ಯ ಇಲಾಖೆಯವರು ನಾಗರಾಜನ ಬಗ್ಗೆ ಏನೆಂದು ಜಾಹೀರಾತು ನೀಡಿದರು?

## ಇ–ವಿಭಾಗ

III. (ಅ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2 × 3 = 6)**

29) ಕೆಲವಂ ಬಲ್ಲವರಿಂದ ಕಲ್ತು

30) ಹಬ್ಬಲಿ ಅವರ ರಸಬಳ್ಳಿ

31) ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಳೋ.

(ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(1 × 3 = 3)**

32) ಅದು ಅವರು ಆವರೆಗೂ ನೋಡಿರದ ಪ್ರಾಣಿ.

33) "ಈ ಅದೃಷ್ಟ ನಿನಗೂ ಇತ್ತಲ್ಲೆ ?"

34) ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು .

(ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(1 × 3 = 3)**

35) ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.

36) ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ .

## ಈ–ವಿಭಾಗ

IV. (ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(2 × 4 = 8)**

37) ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

38) ಗುರುವು ಲಘುವರ್ತನದಲ್ಲಿ ವರ್ತಿಸಬಾರದೇಕೆ?

39) ದ್ರೌಪದಿಯು ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

40) ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

ಹುಟ್ಟಿದ್ದು : ಆಸ್ಪತ್ರೆಯಲ್ಲಿ

ಬೆಳೆದದ್ದು : ಬಸ್ಸು ಟ್ರಾಂ ಕಾರು ಟ್ಯಾಕ್ಸಿ ಎಲೆಕ್ಟ್ರಿಕ್ ಟ್ರೇನುಗಳಲ್ಲಿ

ಕುಡಿದದ್ದು : ಕಾಣದೆಮ್ಮೆಯ ಕೆಚ್ಚಲು ಕರೆದು ಕಳುಹಿಸಿದ ಬಾಟ್ಲಿಯ ಹಾಲು, ಗ್ರೈಪ್ ಸಿರಪ್, ಹಾರ್ಲಿಕ್ಸ್ ಇತ್ಯಾದಿ.

ಪ್ರಶ್ನೆಗಳು :

ಅ) ಮಗು ಹುಟ್ಟಿದ್ದೆಲ್ಲಿ ? (1 ಅಂಕ)

ಆ) 'ಬೆಳೆದದ್ದು' ಎಂಬುದಕ್ಕೆ ಮಗುವಿನ ಉತ್ತರವೇನು? (1 ಅಂಕ)

ಇ) ಕುಡಿದದ್ದೇನು ಎಂಬುದಕ್ಕೆ ಮಗುವು ಏನೆಂದು ಉತ್ತರಿಸುತ್ತದೆ? (2 ಅಂಕ)

(ಆ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(1 × 4 = 4)**

41) ಬಸಲಿಂಗನು ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?

42) ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿಯು ಬಯಸುವುದೇಕೆ?

(ಇ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(1 × 4 = 4)**

43) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?

44) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ? ವಿವರಿಸಿ.

## ಉ–ವಿಭಾಗ

## (ಭಾಷಾಭ್ಯಾಸ ಮತ್ತು ರಚನೆ)

V. (ಅ) ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ. **(4 × 2 = 8)**

45) ಎರಡು ಪದಗಳ ನಾನಾರ್ಥವನ್ನು ಬರೆಯಿರಿ:

ನರ, ಗುರು, ಹೊಳೆ

46) ಎರಡು ಪದಗಳ ಗುಣವಾಚಕಗಳನ್ನು ಗುರುತಿಸಿ:

ಹುಸಿನಿದ್ದೆ, ಕಲಿಭೀಮ, ಬೆಳ್ಳಿಲೋಟ

47) ಎರಡು ಕ್ರಿಯಾಪದಗಳ 'ಧಾತು' ಗುರುತಿಸಿ:

ಬರೆಯುವರು, ಹೋಗುತ್ತಾರೆ, ಕುಣಿಯುವಳು

48) ಎರಡು ಕ್ರಿಯಾಪದಗಳ ಕಾಲವನ್ನು ಗುರುತಿಸಿ:

ತಿಂದನು, ಕರೆಯುತ್ತಾರೆ, ಹಾಡುವರು

49) ಎರಡರ 'ತದ್ಭವ' ರೂಪ ತಿಳಿಸಿ:

ಶಿರ, ಯೋಗಿ, ಆಕಾಶ

50) ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ:

ದಾರಿದೀಪ, ತಲೆಬಾಗು, ಮೊರೆಹೋಗು

(ಆ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧ ರಚಿಸಿ: **(1 × 4 = 4)**

51) ಗ್ರಂಥಾಲಯಗಳ ಮಹತ್ತ್ವ

**ಅಥವಾ**

ಮತದಾನದ ಮಹತ್ತ್ವ

(ಇ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪತ್ರಲೇಖನ ರಚಿಸಿ: **(1 × 4 = 4)**

52) ವಿಜಯ, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಉಡುಪಿ – ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ರಚನ, ದ್ವಿತೀಯ ಪಿಯುಸಿ, ಸದ್ವಿದ್ಯಾ ಪದವಿಪೂರ್ವ ಕಾಲೇಜು, ಶಿರಸಿ, ಉ.ಕ.ಜಿಲ್ಲೆ – ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಪರೀಕ್ಷಾ ಸಿದ್ಧತೆ ಕುರಿತು ಒಂದು ಪತ್ರವನ್ನು ಬರೆಯಿರಿ.

**ಅಥವಾ**

ಭುವನ, ದ್ವಿತೀಯ ಪಿಯುಸಿ, ವಿದ್ಯಾ ವಿಕಾಸ ಪದವಿ ಪೂರ್ವ ಕಾಲೇಜು, ಮೈಸೂರು – ಈ ವಿಳಾಸ ನಿಮ್ಮದೆಂದು ಭಾವಿಸಿ, ನಿಮ್ಮ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರಕೋರಿ ಕಾಲೇಜಿನ ಪ್ರಾಚಾರ್ಯರಿಗೊಂದು ಪತ್ರ ಬರೆಯಿರಿ.



01 Kannada 04-2025.indd 7 16-04-2025 11:46:32

01 Kannada 04-2025.indd 8 16-04-2025 11:46:32

**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ**

## ಮಾದರಿ ಪ್ರಶ್ನೆಪತ್ರಿಕೆ – 1

**ತರಗತಿ** : ದ್ವಿತೀಯ ಪಿಯುಸಿ — **ಶೈಕ್ಷಣಿಕ ವರ್ಷ** : 2024–25

**ವಿಷಯ**: ಕನ್ನಡ (01) — **ಗರಿಷ್ಠ ಅಂಕಗಳು** : 80

**ಸಮಯ**: 3 ಗಂಟೆಗಳು — **ಒಟ್ಟು ಪ್ರಶ್ನೆಗಳ ಸಂಖ್ಯೆ** : 52

**ಸೂಚನೆ** :

**"ಅ- ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

### ಅ- ವಿಭಾಗ

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**10x1=10**

1) ಯಾರನ್ನು ಕೊಲ್ಲುವುದಿಲ್ಲವೆಂದು ವಿದ್ಯಾದೇವತೆ ಹೇಳಿತು?

ಅ) ವಿಭೀಷಣ ಮತ್ತು ಕುಂಬಕರ್ಣ — ಆ) ಅಂಗದ ಮತ್ತು ಹನುಮಂತ

ಇ) ರಾಮ ಮತ್ತು ಲಕ್ಷ್ಮಣ — ಈ) ರಾಮ ಮತ್ತು ಸೀತೆ

2) ಯಾರು ಅನ್ಯಲಿಂಗವನ್ನು ನೆನೆಯುವುದಿಲ್ಲ?

ಅ) ದೇವಾಲಯದಲ್ಲಿದ್ದವರು — ಆ) ತೀರ್ಥಯಾತ್ರೆಗೆ ಹೋದವರು

ಇ) ಸಾಮಾನ್ಯ ಭಕ್ತ — ಈ) ಅಂಗದ ಮೇಲೆ ಲಿಂಗ ಧರಿಸಿದವನು

3) "ಹೆಣ್ಣು ಹರಿಬಕ್ಕೋಸುಗವೆ ತ
ಮ್ಮಣ್ಣನಾಜ್ಞೆಯ ಮೀರಿ ಕುಂತಿಯ
ಚಿಣ್ಣ ಬದುಕಿದನೆಂದು ನುಡಿವರು ಕುಜನರಾದವರು – ಈ ಪದ್ಯಭಾಗದಲ್ಲಿ ಬರುವ 'ಕುಂತಿಯ ಚಿಣ್ಣ' ಯಾರು?

ಅ) ಧರ್ಮರಾಯ — ಆ) ಭೀಮ

ಇ) ನಕುಲ — ಈ) ಅರ್ಜುನ

4) ಜಾಲಿಯ ರಸಸ್ವಾದ ಹೀಗಿರುತ್ತದೆ

ಅ) ಒಗರಾಗಿರುತ್ತದೆ — ಆ) ಸಿಹಿಯಾಗಿರುತ್ತದೆ

ಇ) ವಿಷದಂತಿರುತ್ತದೆ — ಈ) ಹಿತವಾಗಿರುತ್ತದೆ

5) ಯಾವುದು ಚಿಂತನದಿ ಮುಳುಗಿರಲಿ ಎಂದು ಕವಿ ಆಶಿಸುತ್ತಾನೆ?

ಅ) ಬಾಲ್ಯ — ಆ) ಯವ್ವನ

ಇ) ಮುಪ್ಪು — ಈ) ಜೀವನ

6) ಮೂಲೆಮನೆ ಮುದ್ದೇಗೌಡರಿಗೂ ಮೂತ್ರಪಿಂಡದ ಕಲ್ಲಾಗಿತ್ತು ಎಂದು ತಿಳಿದಾಗ, ಅವರ ಮನೆಗೂ ಹೋದೆ. 'ಓಹ್ ಈಗದೇನೂ ದೊಡ್ಡ ಆಪರೇಷನ್ ಅಲ್ಲಮ್ಮ, ನಾನು ನಾಲ್ಕು ಬಾರಿ ಮಾಡಿಸಿಕೊಂಡಿದ್ದೇನೆ' ಎಂದು ಅಂಗಿ ಎತ್ತಿ ತೋರಿಸಿದರು. – ಈ ಸಾಲುಗಳಲ್ಲಿ ಮುದ್ದೇಗೌಡರಿಗೆ ಮೂತ್ರಪಿಂಡದ ಕಲ್ಲಿನ ನಿರ್ವಹಣೆ ಬಗ್ಗೆ ಇರುವ ಅಭಿಪ್ರಾಯವೇನು?

ಅ) ಜಾಗರೂಕತೆ — ಆ) ಭಯ

ಇ) ಸಂಶಯ — ಈ) ಅಜಾಗರೂಕತೆ

7) ಯಾವ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು?

ಅ) ಸೀತಾಸ್ವಯಂವರ — ಆ) ಸೀತಾಪಹರಣ

ಇ) ರಾಮಾಶ್ವಮೇಧ — ಈ) ಸೀತಾಪರಿತ್ಯಾಗ

8) ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?

ಅ) ಶಿಕಾರಿ ಬಂಡಿ ಆ) ಶಿಕಾರಿ ಗುಂಡಿ

ಇ) ಶಿಕಾರಿ ಮಂಡಿ ಈ) ಶಿಕಾರಿ ಗಂಡಿ.

9) ಹಳೇಕೊಪ್ಪದ ಸುಬ್ಬಣ್ಣನಿಗೆ ಆನೆಯಿಂದಾದ ತೊಂದರೆ

ಅ) ಮರ ಉರುಳಿಸಿದ್ದು ಆ) ಕೊಟ್ಟಿಗೆ ಉರುಳಿಸಿದ್ದು

ಇ) ಮನೆ ಉರುಳಿಸಿದ್ದು ಈ) ಮೇಕೆ ಉರುಳಿಸಿದ್ದು

10) " ಏನ್ ಸ್ವಾಮಿ, ಸಾಯೋದಕ್ಕೆ ಹೆದರೋವ ನಾನು ಅಂತ ತಿಳುಕೊಂಡ್ರಾ? ಲೈನ್ ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ? ನಮ್ಮ ಡಿಪಾರ್ಟ್ ಮೆಂಟಿನ ಲೈನ್ ಮನ್ ಗಳ್ಯಾರಾದ್ರೂ ಈವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ?" ಲೈನ್ ಮನ್ ದುರ್ಗಪ್ಪನ ಮಾತುಗಳು ಆತನ ಕೆಲಸದ ಬಗ್ಗೆ ಏನನ್ನು ಸೂಚಿಸುತ್ತದೆ.

ಅ) ಸುಲಭದ ಕೆಲಸ ಆ) ಕಷ್ಟಕರವಾದ ಕೆಲಸ

ಇ) ಕಿಡಿಗೇಡಿತನದ ಕೆಲಸ ಈ) ಅಪಾಯಕಾರಿ ಕೆಲಸ

**(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. 5x1=05**

(ಕನ್ನಡಿಗರು, ಪುದುತೋಟಂ, ಅಣ್ಣಾಮಲೈ, ಪೆನ್ ಶನ್ ದಾರರಿಗೆ, ಶಿವಸುಬ್ರಮಣ್ಯ ಅಯ್ಯರ್, ಕುದುಪನಿಗೆ,)

11) ವಾಲ್ ಪರೈ ಮಧ್ಯದಲ್ಲಿ ____________________ ತೋಟವಿದೆ.

12) ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು ________________________

13) ಧಣಿಗಳು ಹೊಳೆಯ ಹೂಳೆತ್ತಲು ______________________ಸೂಚಿಸಿದರು.

14) ಕಲಾಂ ಅವರು ______________________ ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು.

15) ಬಾಯಿ ಚಪಲ ______________________ ಜಾಸ್ತಿ ಇರುತ್ತದೆ.

**(ಇ) ಹೊಂದಿಸಿ ಬರೆಯಿರಿ 5x1=05**

| | |
|---|---|
| 16. ಅ) ಕೀರ್ತನೆ | 1) ತೆರೆದ ದಾರಿ |
| ಆ) ಮುಂಬೈ ಜಾತಕ | 2) ಒಮ್ಮೆ ನಗುತ್ತೇವೆ |
| ಇ) ಕೆ.ಎಸ್. ನಿಸಾರ್ ಅಹಮದ್ | 3) ಟಿ.ಯಲ್ಲಪ್ಪ |
| ಈ) ಹತ್ತಿ_ಚಿತ್ತ...ಮತ್ತು_ | 4) ಜಾಲಿಯ ಮರ |
| ಉ) ನಾನೆಂಬ ಮಾಯೆ | 5) ಶಿಲುಬೆ ಏರಿದ್ದಾನೆ |
| | 6) ದ.ರಾ.ಬೇಂದ್ರೆ |

**ಆ – ವಿಭಾಗ**

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=06**

17. ರಾವಣನಿಗೆ ಸೀತೆಯ ಬಗ್ಗೆ ವೈರಾಗ್ಯ ಮೂಡಿದ ಸಂದರ್ಭವನ್ನು ವಿವರಿಸಿ.

18. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ?

19. ಬೆಳಕು - ಬೇಟೆಗಾರ ಹೇಗೆ ಬರುತ್ತಾನೆ?

20. ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ, ಏನನ್ನು ಅನ್ನುವಂತಿದೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x2=04**

21. ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆ ಬಗ್ಗೆ ಏನೆಂದು ಪ್ರತಿಕ್ರಿಯಿಸಿದರು?

22. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

23. ಕಲಾಂ ಅವರು ಬಂಡೆಗಳ ಬಸಿರಲ್ಲಿ ಕಂಡದ್ದೇನು ?

24. ಪಟ್ಟಣದ ಹೊಟೇಲಿನ ಕಟ್ಟಡ ಹೇಗಿದೆ?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=06**

25. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
26. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?
27. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?
28. ಜಬ್ಬಾರ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ ?

## ಇ – ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 2x3=06**

29. ಜ್ಯೋತಿ ನಿನ್ನ್ಯಾರ ಹೋಲರ
30. ಕುಳಿತು ಕೆಮ್ಮುವ ಪ್ರಾಣಿ
31. ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1x3=03**

32. ಹಾಡುವುದು ಅವುಗಳಿಗೆ ಅನಿವಾರ್ಯ, ಅವುಗಳ ಕರ್ಮ
33. "ಈ ಅದೃಷ್ಟ ನಿನಗೂ ಇತ್ತಲ್ಲೇ?"
34. ನೀರಿಳಿಯ ಗಂಟಲೊಳ್ ಕಡುಬಂ ತುರುಕಿದಂತಾಯ್ತು

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1x3=03**

35. ಹೊರಗಡೆಯಿಂದ ಎಕ್ಸ್ ಪೋರ್ಟ್ ಆದವು
36. ಈ ಕಂಬದೊಳ್ಗೆ ಏನೋ ಸೇರ್ಕೊಂಡಿದೆ

## ಈ – ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2x4=08**

37. 'ಕದಡಿದ ಸಲಿಲಂ ತಿಳಿವಂದದೆ' ಕಾವ್ಯಭಾಗದಲ್ಲಿ ಕಂಡುಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ.
38. ರಕ್ಷಿಸಬೇಕಾದವರೇ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
39. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ?
40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಯಿಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ
ಒಣಗಲ್ಪೈರಿಗೆ ಬಾರದಿರ್ದ ಮಳೆ ತಾಂ ಬಂದೇನಾಪತ್ತಿನೊಳ್
ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ
ತೃಣವೇ ಪರ್ವತವಲ್ಲವೇ ಹರಹರಾ ಶ್ರೀಚೆನ್ನಸೋಮೇಶ್ವರಾ

ಅ) ಬೆಳೆಗೆ ಮಳೆ ಯಾವಾಗ ಬೇಕು? (1 ಅಂಕ)

ಆ) ಈ ಪದ್ಯದ ಕವಿಯ ಅಂಕಿತ ಯಾವುದು? (1 ಅಂಕ)

ಇ) ಸಮಯೋಚಿತಕ್ಕಾದ ಹುಲ್ಲುಕಡ್ಡಿಯು ಕೂಡ ಪರ್ವತಕ್ಕೆ ಸಮಾನ ಎಂಬ ಹೇಳಿಕೆಯನ್ನು ಸಮರ್ಥಿಸಿ. (2 ಅಂಕ)

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1x4=04**

41. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?
42. ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿ ಬಯಸುವುದೇಕೆ ವಿವರಿಸಿ?

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1x4=04**

43. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ ವಿವರಿಸಿ?
44. ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು?

## ಉ – ವಿಭಾಗ

### (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **4x2=08**

45. ಕೆಳಗಿನ ಎರಡು ಶಬ್ದಗಳಿಗೆ ತದ್ಭವ ರೂಪ ಬರೆಯಿರಿ.

ವೀರ, ಆಕಾಶ, ಮುಖ

46. ಕೆಳಗಿನ ಎರಡು ಪದಗಳ ಗುಣವಾಚಕಗಳನ್ನು ಗುರುತಿಸಿ, ಬರೆಯಿರಿ.

ಹಾಸುಗಂಬಿ, ಶುದ್ಧನೀರು, ದೂರದೃಷ್ಟಿ

47. ಕೆಳಗಿನ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.

ಗುರುವಿಗೆ, ತಿಮ್ಮಪ್ಪನವರಲ್ಲಿ, ಕಟ್ಟಿಗೆಯ

48. ಕೆಳಗಿನ ಎರಡು ಕ್ರಿಯಾಪದಗಳ ಕಾಲವನ್ನು ಬರೆಯಿರಿ.

ಹೋದವು, ಓದಿದಳು, ನಲಿಯುತ್ತಾರೆ

49. ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಕೈಯೊಡ್ಡು, ರೈಲುಬಿಡು, ರಾಮಬಾಣ

50. ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

**(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1x4=04**

51. ವಿದ್ಯಾರ್ಥಿ ಜೀವನದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಮಹತ್ವ

**ಅಥವಾ**

ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಭಾರತೀಯ ಕ್ರೀಡಾಪಟುಗಳ ಸಾಧನೆ.

**(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** **1x4=04**

52. ಮೋಹನ/ಸುನಂದಾ, ದ್ವಿತೀಯ ಪಿಯುಸಿ, ಮದರ್ ತೆರೇಸಾ ಪದವಿ ಪೂರ್ವ ಕಾಲೇಜು, ಜಗಳೂರು, ದಾವಣಗೆರೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ರಾಜಶೇಖರ, ಕಾರಂತ ರಸ್ತೆ, ಲಕ್ಷ್ಮೀಪುರ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಹೋಗಲು ಹಣ ಮತ್ತು ಅನುಮತಿಯನ್ನು ಕೋರಿ ಪತ್ರ ಬರೆಯಿರಿ.

**ಅಥವಾ**

ಗಂಗಾ/ಭೀಮೇಶ, ದ್ವಿತೀಯ ಪಿಯುಸಿ, ಅಬ್ದುಲ್ ಕಲಾಂ ಪಿಯು ಕಾಲೇಜು, ಆಳಂದ, ಕಲಬುರಗಿ ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರ ಕೋರಿ ಪತ್ರ ಬರೆಯಿರಿ.

**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ**

**ಮಾದರಿ ಪ್ರಶ್ನೆಪತ್ರಿಕೆ – 2**

**ತರಗತಿ** : ದ್ವಿತೀಯ ಪಿಯುಸಿ **ಶೈಕ್ಷಣಿಕ ವರ್ಷ** : 2024–25

**ವಿಷಯ**: ಕನ್ನಡ (01) **ಗರಿಷ್ಠ ಅಂಕಗಳು** : 80

**ಸಮಯ**: 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ** : 52

**ಸೂಚನೆ** :

**"ಅ- ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

## ಅ- ವಿಭಾಗ

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** **10x1=10**

1) ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆರದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್

ಈ ಪದ್ಯಭಾಗಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ

ಅ) ಎಲ್ಲ ಸತಿಯರೂ ಪುಣ್ಯವತಿಯರೆ

ಆ) ಸೀತೆಗೆ ರಾಮನಲ್ಲಿ ಹೆಚ್ಚು ಭಕ್ತಿ

ಇ) ಸೀತೆ ರಾಮನಲ್ಲಿ ಸದ್ಭಾವವೊಳಗೊಂಡ ಪುಣ್ಯವತಿ

ಈ) ಪತಿಭಕ್ತಿಯಲ್ಲಿ ಸದ್ಭಾವವು ತೃಣ ಸಮಾನ

2) ಗುರು ಹೇಗೆ ವರ್ತಿಸಬಾರದು?

ಅ) ಲಘುವಾಗಿ ಆ) ವಿನಯವಂತನಾಗಿ

ಇ) ಘನತೆಯುಳ್ಳವನಾಗಿ ಈ) ಹಸನ್ಮುಖಿಯಾಗಿ

3) ಹಗೆಯನ್ನು ಏನೆಂದು ಉಪೇಕ್ಷಿಸಬಾರದು?

ಅ) ವೀರನೆಂದು ಆ) ಶತ್ರುವೆಂದು

ಇ) ಬಾಲಕನೆಂದು ಈ) ಸ್ನೇಹಿತನೆಂದು

4) ದುರ್ಗಂಧ ಬಿಡದಿರುವುದು

ಅ) ಆನೆ ಆ) ಊರಹಂದಿ

ಇ) ಗೂಬೆ ಈ) ಕೋತಿ

5) ಹುಸಿನಿದ್ದೆ ಸಾಕು ಎಂದು ಕವಿ ಹೇಳಿರುವುದು

ಅ) ತೂಕಡಿಸುವವರಿಗೆ ಆ) ಮುದುಕರಿಗೆ

ಇ) ಗಾಢನಿದ್ರೆಯಲ್ಲಿರುವವರಿಗೆ ಈ) ಮಕ್ಕಳಿಗೆ

6) ನಾಗರಿಕತೆಯ ಉನ್ನತಿಯ ಆದರ್ಶದೊಡನೆ ಆರಂಭವಾಗುವ ಅಭಿವೃದ್ಧಿಯು ಏನಾಗುತ್ತದೆ?

ಅ) ದೂರದೃಷ್ಟಿ ಒಳನೋಟವಿರುವ ಅಭಿವೃದ್ಧಿಯಾಗಿರುತ್ತದೆ.

ಆ) ಮನುಕುಲದ ಪತನಕ್ಕೆ ಕಾರಣವಾಗುತ್ತದೆ.

ಇ) ಮಾನವ ಸಾಮರ್ಥ್ಯಕ್ಕೆ ದಕ್ಕಿದ ವಿಜಯಪತಾಕೆಯಾಗಿರುತ್ತದೆ.

ಈ) ಸದೃಢ ಆರ್ಥಿಕತೆಗೆ ಸಹಕಾರಿಯಾಗಿದೆ.

7) ಹಳ್ಳಿಯ ಚಹಾ ಫಳಾರದ ಅಂಗಡಿಯ ಹೆಸರು

ಅ) ಚಂದ್ರುಭವನ ಆ) ಇಂದ್ರುಭವನ

ಇ) ರಾಜಭವನ ಈ) ಗುರುಭವನ

8) "ಅಲ್ರೀ ಲೈನ್ ಮೇಲೆ ಬಿದ್ದ ಮರ ತೆಗೆದು ಹಾಕೋದು ಕಾನೂನುಬಾಹಿರ ಕೆಲಸ ಅಂತ ನಿಮ್ಮ ಬಾಯಲ್ಲೇ ನಾನು ಕೇಳ್ತಿರೋದು. ನಿಮ್ಮ ಡಿಪಾರ್ಟ್ ಮೆಂಟಿನ ಮರ ಅವನ ಡಿಪಾರ್ಟ್ ಮೆಂಟಿನ ಕಂಬದ ಮೇಲೆ ಬಿದ್ರೆ ಅವನು ಅದನ್ನು ತೆಗೆದುಹಾಕಬೇಕೋ ಬೇಡವೋ ಹೇಳಿ?" ಲೇಖಕರ ಈ ಮಾತುಗಳಿಗೆ ಕೆಳಗಿನ ಯಾವ ಹೇಳಿಕೆ ಸೂಕ್ತ ಸ್ಪಷ್ಟನೆಯಾಗಿದೆ?

ಅ) ಮರ ತೆಗೆಯೋದು ಕಾನೂನುಬಾಹಿರ ಕೆಲಸ.

ಆ) ಮರ ಬೀಳುತ್ತಲೇ ಇರುತ್ತೆ ತೆಗೆಯುವುದು ನಿಮ್ಮ ಕರ್ತವ್ಯ.

ಇ) ಲೈನ್ ಮೇಲೆ ಮರ ಬೀಳೋದು ಸಾಮಾನ್ಯ ಸಂಗತಿ.

ಈ) ಲೈನ್ ಮೇಲೆ ಬಿದ್ದ ಮರ ತೆಗೆಯೋದು ತಪ್ಪಲ್ಲ.

9) ಆನೆ ಇಲ್ಲದ್ದರಿಂದ ವೇಲಾಯುಧ ಕೆಲಸಕ್ಕೆ ಸೇರಿದ್ದು

ಅ) ಕೃಷ್ಣೇಗೌಡರ ಹತ್ತಿರ ಆ) ಶಿವೇಗೌಡರ ಹತ್ತಿರ

ಇ) ಗೂಳೂರು ಮಠದಲ್ಲಿ ಈ) ಶಿವನೂರು ಮಠದಲ್ಲಿ

10) ಪೋಲೀಸರು ಏನೆಂದು ಮಹಜರು ಬರೆದುಕೊಂಡರು?

ಅ) ಹಣ ಸಿಕ್ಕಿದೆ ಆದರೆ ಕೋವಿ ಸಿಗಲಿಲ್ಲ. ಆ) ಕೋವಿಯೂ ಸಿಕ್ಕಿಲ್ಲ, ಹಣವೂ ಸಿಕ್ಕಿಲ್ಲ.

ಇ) ಕೋವಿ ಸಿಕ್ಕಿದೆ ಆದರೆ ಹಣ ಸಿಗಲಿಲ್ಲ. ಈ) ಕೋವಿಯೂ ಸಿಕ್ಕಿದೆ, ಹಣವೂ ಸಿಕ್ಕಿದೆ.

**(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.** **5X1=05**

( ಅದೃಷ್ಟ, ಶ್ರೀರಾಮಾಶ್ವಮೇಧ, ಪ್ರಶ್ನೆ ಕೇಳುವುದು, ದ್ವೀಪಜೀವಿ, ಕಿಡ್ನಿ ಸ್ಟೋನ್, ಒಕ್ಕಲ ಮಕ್ಕಳ )

11) ____________________ ಬಗ್ಗೆ ತಿಳಿಯಲು ಲೇಖಕಿ ಕಮಲಮ್ಮ ಮೇಡಂ ಅವರನ್ನು ಭೇಟಿ ಮಾಡಿದರು.

12) ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ___________________ ಆಗುತ್ತಾರೆ.

13) ಧಣಿ ಎಂದಿಗೂ _____________________ನಂಬುವುದಿಲ್ಲ.

14) ವಿಜ್ಞಾನದ ಅಡಿಪಾಯ _____________________.

15) ಮನೋರಮೆ ______________________ ಕತೆ ಹೇಳಬೇಕೆಂದು ಕೇಳಿದಳು.

**(ಇ) ಹೊಂದಿಸಿ ಬರೆಯಿರಿ** **5X1=05**

| | |
|---|---|
| 16) ಅ) ಕುಮಾರವ್ಯಾಸ | 1) ಗರತಿಯ ಹಾಡು |
| ಆ) ಜಾಲಿಯ ಮರದಂತೆ | 2) ಲಲಿತಾ ಸಿದ್ದಬಸವಯ್ಯ |
| ಇ) ಒಂದು ಹೂ ಹೆಚ್ಚಿಗೆ ಇಡುತೀನಿ | 3) ಹತ್ತಿ_ಚಿತ್ತ...ಮತ್ತು_ |
| ಈ) ಚಿಟ್ಟೆ ಮತ್ತು ಜೀವಯಾನ | 4) ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು |
| ಉ) ಒಮ್ಮೆ ನಗುತ್ತೇವೆ | 5) ಸುಕನ್ಯಾ ಮಾರುತಿ |
| | 6) ಪುರಂದರದಾಸರು |

## ಆ – ವಿಭಾಗ

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 3X2=06**

17) ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?

18) ಉಳಿದ ನಾಲ್ವರು ಪಾಂಡವರ ಭಿನ್ನ ಸ್ವಭಾವಗಳ ಬಗ್ಗೆ ದ್ರೌಪದಿಯ ಅಭಿಪ್ರಾಯವೇನು?

19) ಕವಿಯ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು?

20) ಮುದುಕ ಏನೆಂದು ಗೋಗರೆಯುತ್ತಾನೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 2X2=04**

21) ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು?

22) ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾ ಮಾ ನಾಯಕ ಅಪೇಕ್ಷಿಸಿದ್ದಾರೆ?

23) ಕಲಾಂ ಅವರು ತಾವು ಆತ್ಮಕತೆ ಬರೆದುದು ಏತಕ್ಕಾಗಿ ?

24) ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 3X2=06**

25) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?

26) ಫಾರೆಸ್ಟ್ ಡಿಪಾರ್ಟಮೆಂಟಿನ ನಂಬರ್ ಒನ್ ಎನಿಮಿಗಳು ಯಾರು ಯಾರು?

27) ದುರ್ಗಪ್ಪ ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ಹೇಗೆ ವಿವರಿಸುತ್ತಾನೆ?

28) ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

## ಇ – ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 2X3=06**

29) ಕೆಲವಂ ಬಲ್ಲವರಿಂದ ಕಲ್ತು

30) ಹಬ್ಬುಲಿ ಅವರ ರಸಬಳ್ಳಿ

31) ಮನ್ನಿಸಲಿ ನಿಮ್ಮನ್ನ ಆ ದೇವರೆ!

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1X3=03**

32) ಅದು ಅವರು ಆವರೆಗೂ ನೋಡಿರದ ಪ್ರಾಣಿ

33) ನೋಡು ನಿನ್ನ ಎದುರು ಎರಡು ಆಯ್ಕೆಗಳಿವೆ

34) ಕನ್ನಡಂ ಕತ್ತುರಿಯಲ್ತೆ

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1X3=03**

35) ಆನೆ ಸಾಕುವುದು ಎಲೆಕ್ಷನ್ನಿಗೆ ನಿಂತ ಹಾಗೆ

36) ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ!

## ಈ – ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2X4=08**

37) ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

38) ಶಿವಪಥವನ್ನರಿಯದವನ ಭಕ್ತಿ ನಿರರ್ಥಕವೆಂದು ಹೇಳಿದ ಬಸವಣ್ಣನ ವಿಚಾರಗಳನ್ನು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿ.

39) ಮುಂಬೈಜಾತಕ ಕವಿತೆಯ ಹಿನ್ನಲೆಯಲ್ಲಿ ನಗರ ಜೀವನವನ್ನು ವಿಶ್ಲೇಷಿಸಿ.

40) ಈ ಕೆಳಗಿನ ಪದ್ಯಭಾಗವನ್ನು ಅರ್ಥೈಯಿಸಿಕೊಂಡು ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ರಮಣ ಕೇಳುಳಿದವರು ತನ್ನನು
ರಮಿಸುವರು ಮಾನಾರ್ಥವೆನೆ ನಿ
ರ್ಗಮಿಸುವರು ನೀನಲ್ಲದುಳಿದವರುಚಿತ ಬಾಹಿರರು
ಮಮತೆಯಲಿ ನೀ ನೋಡು ಚಿತ್ತದ
ಸಮತೆಯನು ಬೀಳ್ಕೊಡು ಕುಠಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈಮುಗಿದು

ಅ) ಪದ್ಯಭಾಗದಲ್ಲಿ ಮಾನಾರ್ಥವೆನೆ ನಿರ್ಗಮಿಸುವ ಆ ಉಳಿದವರು ಯಾರು? (1 ಅಂಕ)

ಆ) ನೀನೆ ಸೂಕ್ತವಾದವನೆಂದು ಯಾರನ್ನು ಕುರಿತು ಹೇಳಲಾಗಿದೆ? (1 ಅಂಕ)

ಇ) ದ್ರೌಪದಿ ಕೈಮುಗಿದು ಏನೆಂದು ಪ್ರಾರ್ಥಿಸುತ್ತಿದ್ದಾಳೆ ವಿವರಿಸಿ? (2 ಅಂಕ)

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **1X4=04**

41) ಬಸಲಿಂಗ ಡಾ. ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು?

42) ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **1x4=04**

43) ಪೋಸ್ಟಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

44) ಟೆಲಿಫೋನ್ ಲೈನ್ ಮನ್ ತಿಪ್ಪಣ್ಣನ ಸಾವು ಹೇಗಾಯಿತು ಎಂಬುದನ್ನು ನಿಮ್ಮ ಮಾತುಗಳಲ್ಲಿ ಸಂಕ್ಷಿಪ್ತವಾಗಿ ಬರೆಯಿರಿ.

## ಉ – ವಿಭಾಗ
### (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 4X2=08**

45) ಕೆಳಗಿನ ಎರಡು ಪದಗಳಿಗೆ **ಸಮಾನಾರ್ಥ**ಗಳನ್ನು ಬರೆಯಿರಿ.

ಚಿತ್ತ, ಮಾರ, ತಾಳ್ಮೆ

46) ಕೆಳಗಿನ ಎರಡು ಶಬ್ದಗಳಿಗೆ **ತದ್ಭವ** ರೂಪ ಬರೆಯಿರಿ.

ದೃಷ್ಟಿ, ಯೋಗಿ, ಸಂಸ್ಕೃತ

47) ಕೆಳಗಿನ ಎರಡು ಪದಗಳ **ಗುಣವಾಚಕ**ಗಳನ್ನು ಗುರುತಿಸಿ, ಬರೆಯಿರಿ.

ಮಣಆಯಾಸ, ದುರ್ಜನ, ಕೆನೆಹಾಲು,

48) ಕೆಳಗಿನ ಎರಡು ಕ್ರಿಯಾಪದಗಳ **ನಿಷೇಧ ರೂಪ**ಗಳನ್ನು ಬರೆಯಿರಿ.

ಹಾಡುವಳು, ತಿನ್ನುವನು, ನಿಲ್ಲುವುದು

49) ಕೆಳಗಿನ ಎರಡು **ನುಡಿಗಟ್ಟು**ಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಮೊರೆಹೋಗು, ಕಾಲುಕೀಳು, ತಲೆಹಾಕು

50) ಯಾವುದಾದರೂ ಎರಡು **ಅನ್ಯದೇಶ್ಯ** ಪದಗಳನ್ನು ಬರೆಯಿರಿ.

**(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1X4=04**

51) ಸ್ತ್ರೀ ಭ್ರೂಣ ಹತ್ಯೆಯಿಂದ ಎದುರಾಗುವ ಸಮಸ್ಯೆಗಳು

**ಅಥವಾ**

ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ನಾಗರಿಕ ಸಮಾಜದ ಪಾತ್ರ.

**(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** **1x4=04**

52) ರಾಜು/ರಮ್ಯ, ದ್ವಿತೀಯ ಪಿಯುಸಿ, ಕುವೆಂಪು ಪದವಿ ಪೂರ್ವ ಕಾಲೇಜು, ಜಯನಗರ, ಮೈಸೂರು, ಈ ವಿಳಾಸದಲ್ಲಿರುವವರು ನೀವೆಂದು ತಿಳಿದು ಕುಸುಮ/ವಿಜಯ್, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಜಾಜಿನಗರ, ಬೆಂಗಳೂರು ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ವಾರ್ಷಿಕ ಪರೀಕ್ಷೆಗೆ ನೀವು ಮಾಡಿಕೊಂಡಿರುವ ಸಿದ್ಧತೆಯನ್ನು ಕುರಿತು ಪತ್ರ ಬರೆಯಿರಿ.

**ಅಥವಾ**

ಪ್ರದೀಪ/ಸುನೀತ, ದ್ವಿತೀಯ ಪಿಯುಸಿ, ಜೆ. ಎಸ್. ಎಸ್ ಪದವಿ ಪೂರ್ವ ಕಾಲೇಜು, ಮಣಿಪಾಲ, ಉಡುಪಿ ಇದು ನಿಮ್ಮ ವಿಳಾಸ ಎಂದು ತಿಳಿದು ಮಣಿಪಾಲದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ವ್ಯವಸ್ಥಾಪಕರಿಗೆ ನಿಮ್ಮ ಉಳಿತಾಯ ಖಾತೆಯನ್ನು ತೆರೆಯುವಂತೆ ಕೋರಿ ಪತ್ರ ಬರೆಯಿರಿ.

**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ**

## ಮಾದರಿ ಪ್ರಶ್ನೆಪತ್ರಿಕೆ – 3

**ತರಗತಿ** : ದ್ವಿತೀಯ ಪಿಯುಸಿ **ಶೈಕ್ಷಣಿಕ ವರ್ಷ** : 2024–25

**ವಿಷಯ**: ಕನ್ನಡ (01) **ಗರಿಷ್ಠ ಅಂಕಗಳು**: 80

**ಸಮಯ**: 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ** : 52

**ಸೂಚನೆ** :

**"ಅ- ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

## ಅ- ವಿಭಾಗ

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. 10x1=10**

1) ಸೀತೆಯನ್ನು ರಾವಣ ಇಲ್ಲಿರಿಸಿದ್ದನು

(ಅ) ಅಶೋಕವನ (ಆ) ಉದ್ಯಾನವನ (ಇ) ಪ್ರಮದವನ (ಈ) ಉಪವನ

2) ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?

(ಅ) ಮರ್ಕಟನ ಕೈಯಲ್ಲಿ (ಆ) ಶರಣರ ಕೈಯಲ್ಲಿ (ಇ) ಹಂದೆಯ ಕೈಯಲ್ಲಿ (ಈ) ಅಂಧಕನ ಕೈಯಲ್ಲಿ

3) ಮನದೊಳಗೆ ಹಗೆಗಳನು ಹಿಂಡಿದವನು

(ಅ) ಅರ್ಜುನ (ಆ) ನಕುಲ (ಇ) ಭೀಮ (ಈ) ಸಹದೇವ.

4) ಯಾವ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ?

(ಅ) ನಾಜೂಕಿನ (ಆ) ಬಿನ್ನಾಣದ (ಇ) ಬಣ್ಣದ (ಈ) ಪ್ರೀತಿಯ

5) ''ಶಿಲುಬೆಯೇರಿದ್ದಾನೆ ಜೀಸಸ್ ಗೋಡೆಯಲ್ಲಿ

ಬಾಗಿದ ಶಿರ.... ಕುತ್ತಿಗೆಯಲಿ ಉಬ್ಬಿದೊಂದು ನರ

ಯಾತನೆಗೂ ನಲ್ವಾತನೇ ನುಡಿವ ಮುಖಮುದ್ರೆ''

ಕವಿಯ ಈ ಮಾತುಗಳಲ್ಲಿ ಯಾತನೆಯಲ್ಲಿರುವ ಜೀಸಸ್‌ನ ಮುಖಮುದ್ರೆ ಹೇಗಿದೆ?

(ಅ) ಶುಭವನ್ನು ನುಡಿವಂತೆ (ಆ) ನಲುಮೆಯ ನುಡಿಗಳ ನುಡಿವಂತೆ

(ಇ) ಕೋಪವನ್ನು ಹೊರಹಾಕುವಂತೆ (ಈ) ಬೇಸರವು ತುಂಬಿದಂತೆ.

6) ''ಕನ್ನಡಿಗರು ಕನ್ನಡ ನಾಡಿನಲ್ಲಿಯೇ ತಬ್ಬಲಿಗಳಾದರೆ ಅವರಿಗೆ ಆಶ್ರಯವೆಲ್ಲಿದೆ? ಕನ್ನಡಿಗರ ಸಂಕಷ್ಟಗಳಿಗೂ ಒಂದು ಮಿತಿಯಿದೆ. ಅವರ ತಾಳ್ಮೆಗೆ ತಪ್ಪು ಅರ್ಥ ಹಚ್ಚಬಾರದು. ಭಾಷೆಯನ್ನು ಬಿಟ್ಟು ಬದುಕು ಇರುವುದಿಲ್ಲ'' ಲೇಖಕರ ಈ ನುಡಿಯಲ್ಲಿನ ಸಂದೇಶವೇನು

(ಅ) ಇಂಗ್ಲೀಷ್ ವ್ಯಾಮೋಹ (ಆ) ಮಾತೃಭಾಷೆಯ ಮಹತ್ವ

(ಇ) ಜೀವನದ ಮಹತ್ವ (ಈ) ಕನ್ನಡಿಗರ ಔದಾರ್ಯ

7) ಲೋಕಲ್ ಸುದ್ದಿಗಳಿಗೆ ಇಲ್ಲಿ ಪ್ರಾಶಸ್ತ್ಯವಿದೆ

(ಅ) ಮನೆಯಲ್ಲಿ (ಆ) ಶಾಲೆಯಲ್ಲಿ (ಇ) ಚಹಾದಂಗಡಿಯಲ್ಲಿ (ಈ) ಮಾರುಕಟ್ಟೆಯಲ್ಲಿ

8) ದುರ್ಗಪ್ಪ ಕೇಳಿ ಪಡೆಯಲು ಬಂದಿದ್ದು

(ಅ) ಕೋವಿಯನ್ನು (ಆ) ಕತ್ತಿಯನ್ನು (ಇ) ಅಂಕುಶವನ್ನು (ಈ) ಕೊಡಲಿಯನ್ನು

9) ನಿರೂಪಕರ ಇಕಾಲಜಿಸ್ಟ್ ಗೆಳೆಯ

(ಅ) ಪ್ರಕಾಶ (ಆ) ಜಬ್ಬಾರ (ಇ) ದುರ್ಗಪ್ಪ (ಈ]) ಕೃಷ್ಣೇಗೌಡ

10) ''ಸತ್ತಿರೋದು ಇವತ್ತಲ್ಲಾ ನಾಳೆ ನೀವೇ ಕೊಂದು ತಿನ್ನೋ ಪ್ರಾಣಿ. ಅದಕ್ಕೆ ಯಾಕ್ರೀ ನಷ್ಟ ಕಟ್ಟಿ ಕೊಡಬೇಕು? ನಾಳೆ ಮಾಡೋ ಸಾರು ಇವತ್ತೇ ಮಾಡ್ರಿ'' ಎಂದು ನುಡಿದ ನಾಗರಾಜನ ಮಾತಿನಲ್ಲಿ ಇರುವ ಅರ್ಥವೇನು?

(ಅ) ಕುರಿಗಳ ಬಗ್ಗೆ ಅಸಡ್ಡೆ (ಆ) ಜನಗಳಿಗೆ ಸಮಾಧಾನ

(ಇ) ನಾಗರಾಜನ ಉಡಾಫೆ (ಈ) ಆತಂಕಪಡುವ ಅಗತ್ಯವಿಲ್ಲ

**(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** **5 x 1=5**

**( ಶಿವಸುಬ್ರಮಣ್ಯ ಅಯ್ಯರ್, ಎ. ಆರ್ ಕೃಷ್ಣಶಾಸ್ತ್ರಿ, ಮನೋರಮೆ, ಪೂಣಚ್ಚಿ, ಶಾಂಭವಿ, ತಿಮ್ಮಪ್ಪ )**

11) 'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರು ______

12) ________ ಇದು ಮಾರ್ಷನ ಜೊತೆಗಾರನ ಹೆಸರು.

13) ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ _______

14) ____________ ಇವರು ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು.

15) ಕನ್ನಡವು ಕಸ್ತೂರಿಯಲ್ಲವೆ! ಎಂದವರು ________

**16) (ಇ) ಹೊಂದಿಸಿ ಬರೆಯಿರಿ:** **5 x 1=5**

| | |
|---|---|
| ಅ) ಪಗೆಯಂ ಬಾಲಕನೆಂಬರೆ | 1) ಚಿಟ್ಟೆ ಮತ್ತು ಜೀವಯಾನ |
| ಆ) ಜಾಲಿಯ ಮರದಂತೆ | 2) ಒಮ್ಮೆ ನಗುತ್ತೇವೆ |
| ಇ) ಜನಪದ | 3) ತೆರೆದ ದಾರಿ |
| ಈ) ಟಿ. ಯಲ್ಲಪ್ಪ | 4) ಶತಕ |
| ಉ) ಸುಕನ್ಯಾ ಮಾರುತಿ | 5) ಹಬ್ಬಲಿ ಅವರ ರಸಬಳ್ಳಿ |
| | 6) ಪುರಂದರ ದಾಸರು |

## ಆ – ವಿಭಾಗ

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3 x 2=6**

17) ಸೀತೆಯ ತಲ್ಲಣಕ್ಕೆ ಕಾರಣವೇನು?

18) ಗಂಡರೈವರು ಮೂರುಲೋಕದ ಗಂಡರಾರು? ಹೆಸರಿಸಿ.

19) ಹಡೆದವ್ವನನ್ನು ಯಾವಾಗ ನೆನೆಯಬೇಕು?

20) ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2 x 2=4**

21) ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?

22) ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೆ ಇದ್ದೇ ಇರುತ್ತವೆ?

23) ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

24) ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3 x 2=6**

25) ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

26) ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

27) ಹುಚ್ಚು ನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಮುಟ್ಟಯ್ಯ ಹೇಳಿದ?

28) ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

## 'ಇ' ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ:** **2 x 3=6**

29) ತೃಣವೇ ಪರ್ವತವಲ್ಲವೇ.

30) ಮುಳುಗಿರಲಿ ಮುಪ್ಪು ಚಿಂತನದಿ.

31) ಮಾತೇ ಮರೆತು ಹೋಗಿದೆ ಕಣೇ.

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ:** **1 x 3=3**

32) ನೀರುಬಿದ್ದರೆ ಕಣ್ಣು ಹೋಗುವ ಅಪಾಯವಿದೆ.

33) ದುರಂತದ ಮೂಲ ಬೀಜಗಳು ಚಹಾಗಿಡದ ರೂಪದಲ್ಲಿ ಬಂದವು.

34) ಪದ್ಯಂ ವಧ್ಯಂ ಗದ್ಯಂ ಹೃದ್ಯಂ.

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ :** **1 x 3=3**

35) ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳಕೊ.

36) ಕಂಬದ ಮೇಲೆ ಯಾಕೋ ಕೈಲಾಸ ಕಂಡ ಹಾಗೆ ಇದೆಯಲ್ಲಾ.

## 'ಈ' ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.** **1 x 4=4**

37) ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.

38) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

39) ಮುಂಬೈ ಜಾತಕದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?

40) ಕೆಳಗಿನ ವಚನವನ್ನು ಅವಲೋಕಿಸಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಲಘು ಗುರುವಪ್ಪನೆ? ಗುರು ಲಘುವಪ್ಪನೆ? ಆಗದಾಗದು.

ಗುರುಗುರುವೆ, ಲಘುಲಘುವೆ.

ಶ್ರೀ ಗುರು ಲಘುವರ್ತನದಲ್ಲಿ ವರ್ತಿಸಿದಡೆ ಆಗದು ಆಚಾರ.

ಶ್ರೀ ಗುರು ಲಿಂಗ ಜಂಗಮ ಪ್ರಸಾದವನು

ತಾನೆ ಲಘುಮಾಡಿ ಲಘುವಾದನಯ್ಯಾ,

ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಅ) 'ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ' ಅಂಕಿತನಾಮದ ವಚನಕಾರನ ಹೆಸರನ್ನು ಬರೆಯಿರಿ. (1 ಅಂಕ)

ಆ) 'ಶ್ರೀ ಗುರು ಲಘುವರ್ತನದಲ್ಲಿ ವರ್ತಿಸಿದಡೆ ಅದು ಏನಾಗುವುದಿಲ್ಲ? (1 ಅಂಕ)

ಇ) ಪ್ರಸ್ತುತ ವಚನದ ಸಂದೇಶವನ್ನು ನಿಮ್ಮದೇ ವಾಕ್ಯಗಳಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಿ. (2 ಅಂಕ)

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.** **1 x 4=4**

41) ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?

42) ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

**(ಈ) ಯಾವುದಾದರೂ ಒಂದು ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.** **1 x 4=4**

43) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?

44) ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.

## ಉ – ವಿಭಾಗ

## (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **4 x 2=8**

45) ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ: ಗುರು, ಕರ, ಬಗೆ.

46) ಎರಡು ಪದಗಳ ಗುಣವಾಚಕಗಳನ್ನು ಬರೆಯಿರಿ: ಹುಸಿನಿದ್ದೆ, ಕಡುಪಾಪ, ಗೂಗೆಮರಿ.

47) ಎರಡು ಪದಗಳ ತದ್ಭವ ರೂಪ ಬರೆಯಿರಿ: ಯಶ, ವೀರ, ಪರೀಕ್ಷಿಸು.

48) ಎರಡು ಕ್ರಿಯಾಪದಗಳ 'ಧಾತು' ಗುರುತಿಸಿ: ಕಿತ್ತರು, ಬಿದ್ದನು, ಬರುವಳು.

49) ಎರಡು ದ್ವಿರುಕ್ತಿಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. ಮೆಲ್ಲಮೆಲ್ಲನೆ, ಪರಿಪರಿಯಾಗಿ, ನಡುನಡುವೆ.

50) ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿ : ಬಲ್ಲವರಿಂದ, ಕೆಲವಂ, ಪಾಪಿಗೆ.

**(ಆ) ಯಾವುದಾರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1 x 4=4**

51) ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವ ಮಾರ್ಗಗಳು

**ಅಥವಾ**

ದೇಶದ ಅಭಿವೃದ್ಧಿಯಲ್ಲಿ ಯುವಜನರ ಪಾತ್ರ

**(ಇ) ಇವುಗಳಲ್ಲಿ ಯಾವುದಾರೂ ಒಂದನ್ನು ಕುರಿತು ಪತ್ರ ಬರೆಯಿರಿ.** **1 x 4=4**

52) ರಮಾ/ಚೇತನ್, ಕೆ.ಎಲ್.ಇ ಪದವಿ ಪೂರ್ವ ಕಾಲೇಜು, ಮುಧೋಳ ತಾ, ಬಾಗಲಕೋಟೆ ಜಿಲ್ಲೆ, ಇದನ್ನು ನಿಮ್ಮ ವಿಳಾಸವೆಂದು ಭಾವಿಸಿ ನಿಮ್ಮ ಗೆಳೆಯ/ಗೆಳತಿಯಾದ ವಿನಯಾ/ರಾಮಕೃಷ್ಣ, ಶರಣ ಬಸವೇಶ್ವರ ಪದವಿ ಪೂರ್ವ ಕಾಲೇಜು, ಆದರ್ಶನಗರ, ಕಲಬುರಗಿ ಇವರಿಗೆ ನಿಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಒಂದು ಪತ್ರ ಬರೆಯಿರಿ.

**ಅಥವಾ**

ಸವಿತಾ/ಅರವಿಂದ, ಇಂಗಳಗಿ ಗ್ರಾಮ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇಲ್ಲಿ ನೀವು ವಾಸವಿದ್ದೀರೆಂದು ಭಾವಿಸಿ ನಿಮ್ಮ ಊರಿಗೆ ಒಂದು ಸುಸಜ್ಜಿತವಾದ ಗ್ರಂಥಾಲಯವನ್ನು ನಿರ್ಮಿಸಿಕೊಡುವಂತೆ ವಿನಂತಿಸಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

**LX – 2025**

| ವಿಷಯ ಸಂಕೇತ Subject Code | **01** |
|---|---|

# ಕನ್ನಡ / KANNADA

ಸಮಯ: 3 ಗಂಟೆ 00 ನಿಮಿಷಗಳು] (ಒಟ್ಟು ಪ್ರಶ್ನೆಗಳ ಸಂಖ್ಯೆ : 52) ಗರಿಷ್ಠ ಅಂಕಗಳು: 80

Time : 3 Hours 00 Minutes] [Total No. of Questions : 52] [Max. Marks : 80

**ಸೂಚನೆ :**

1. **"ಅ–ವಿಭಾಗ"**ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ–ವಿಭಾಗ

(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10 × 1 = 10)**

1) ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪ ವಿಮೋಹದಿಂದಗಲ್ಚಿದೆ
ನವಿವೇಕೆಯೆನೆನ್ನ ಕುಲದ ಪೆಂಪಳಿವಿನೆಗಂ

ಈ ಪದ್ಯಭಾಗದಲ್ಲಿನ ರಾವಣನ ಮಾತುಗಳು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತವೆ?

(ಅ) ರಾವಣನ ಅವಿವೇಕತನದಿಂದ ಆತನ ಕುಲದ ಹಿರಿಮೆ ಅಳಿಯಿತು.

(ಆ) ರಾಮನನ್ನು ದೂರ ಮಾಡಿದ್ದರಿಂದ ಸೀತೆಗೆ ಈ ದುಃಖ ಬಂದಿದೆ.

(ಇ) ರಾಮ–ಸೀತೆಯರು ನೆಪಮಾತ್ರಕ್ಕೆ ಪ್ರಾಣಪ್ರಿಯರಾಗಿದ್ದರು

(ಈ) ಸೀತೆಗೆ ಆಕೆಯ ಕರ್ಮವಶದಿಂದ ಈ ದುಸ್ಥಿತಿ ಬಂದಿದೆ.

2) ಹಲವು ಹಳ್ಳಗಳು ಸೇರಿ ಏನಾಗುವುದೆಂದು ಸೋಮನಾಥನ ಅಭಿಪ್ರಾಯ?

(ಅ) ಕಾಲುವೆ (ಆ) ನದಿ

(ಇ) ಸರೋವರ (ಈ) ಸಮುದ್ರ

3) ಯಾವ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ?

(ಅ) ಸುಳ್ಳು ಮಾತಿಗೆ (ಆ) ಒಳ್ಳೆಯ ಮಾತಿಗೆ

(ಇ) ಬಿನ್ನಾಣದ ಮಾತಿಗೆ (ಈ) ಕೆಟ್ಟ ಮಾತಿಗೆ

4) ಒಂದು ಹೂ ಹೆಚ್ಚಿಗೆ ಇಡುತೀನಿ ಪದ್ಯದಲ್ಲಿ ಮುದುಕ ಇರುವುದು ಯಾವ ಸ್ಥಳದಲ್ಲಿ ?

(ಅ) ಹೈದರಾಬಾದ್ (ಆ) ಅಸ್ಸಾಂ

(ಇ) ಮುಂಬೈ (ಈ) ಬೆಂಗಳೂರು

5) ಒಮ್ಮೆ ನಗುತ್ತೇವೆ ಪದ್ಯದಲ್ಲಿ ಕವಿ ಜನರಿಗೆ ಯಾವುದಕ್ಕೆ ಗತಿಯಿಲ್ಲ ಎಂದಿದ್ದಾರೆ?

(ಅ) ಗಂಜಿಗೆ (ಆ) ನೀರಿಗೆ

(ಇ) ಮನೆಗೆ (ಈ) ಮೇವಿಗೆ

6) ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ನೆನಪಾಗುವವರು.

(ಅ) ನಿಶಾಶರ್ಮ (ಆ) ಕಮಲ ಮೇಡಂ

(ಇ) ಸೀತಾ (ಈ) ಪ್ಲೇವಿಯಾ

7) "ಆಂ ಪರಾಧೀನೆ ಗಡ! ಪುರಾಣಮನೋದಿದಿಂ
ಬಳಿಯಮಲ್ತೆ ದಕ್ಷಿಣೆಯ ನೀವುದು. ಅರಮನೆಯವರುಂ
ಕಬ್ಬಮಂ ಕಂಡಲ್ತೆ ಕಚ್ಚಳಿಯನಿತ್ತರ್. ಆನುಂ ಕತೆಯಂ
ಕೇಳ್ದು ಸೊಗಸಾಗೆ ಬಲ್ಲಂತೆ ಸಮ್ಮಾನಿಸುವೆಂ"

ಈ ಮೇಲಿನ ಮಾತುಗಳು ಯಾರು ಯಾರಿಗೆ ಹೇಳಿದ ಮಾತುಗಳಾಗಿವೆ?

(ಅ) ಮುದ್ದಣ – ಮನೋರಮೆಗೆ

(ಆ) ಸೀತೆ – ಶ್ರೀರಾಮನಿಗೆ

(ಇ) ಮನೋರಮೆ – ಮುದ್ದಣನಿಗೆ

(ಈ) ಶೇಷ – ವಾತ್ಸಾಯನನಿಗೆ

8) "ಕೃಷ್ಣೇಗೌಡರು ಬಯ್ದಿದ್ದರಿಂದ ಇವತ್ತು ಲಾಯದಲ್ಲೇ ಮಲಗಿ ಅದೇನಾದರೂ ಕಳ್ಳತನದಲ್ಲಿ ಹೊರಹೋಗುವುದನ್ನು ಕಂಡರೆ ಸರಿಯಾಗಿ ಚಚ್ಚಿ ಬುದ್ಧಿ ಕಲಿಸಲು ತೀರ್ಮಾನಿಸಿದ್ದ. ಒಮ್ಮೆ ಕಾಡಿಗೆ ಹೋಗಿ ಬಂದಾಗಲಿಂದ ಏನೋ ದುರ್ಬುದ್ಧಿ ಶುರುವಾಗಿದೆ ಎಂದು ಅವನಿಗೂ ಶಂಕೆ" – ವೇಲಾಯುಧ ಲಾಯದಲ್ಲಿ ಮಲಗಲು ಹೋಗಿದ್ದಕ್ಕೆ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾದ ಕಾರಣವಾಗಿದೆ?

(1) ಕೃಷ್ಣೇಗೌಡರು ಬಯ್ದಿದ್ದರಿಂದ ಲಾಯದಲ್ಲಿ ಮಲಗಲು ಹೋದ.

(2) ಆನೆಗೆ ಹುಚ್ಚು ಹಿಡಿದಿದೆಯೇ ಎಂದು ತಿಳಿಯಲು ಮಲಗಿದ.

(3) ಆನೆ ರಾತ್ರಿ ಲಾಯ ಬಿಟ್ಟು ಹೋಗುತ್ತದೆಯೇ ಎಂದು ತಿಳಿಯಲು.

(4) ಹೆಂಡತಿ ರೇಗಿದ್ದರಿಂದ ಲಾಯದಲ್ಲಿ ಮಲಗಿದ.

(ಅ) 1 ಮತ್ತು 3 ಸರಿ (ಆ) 2 ಮತ್ತು 3 ಸರಿ

(ಇ) 3 ಮತ್ತು 4 ಸರಿ (ಈ) 1 ಮತ್ತು 4 ಸರಿ

9) ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರು

(ಅ) ಜಬ್ಬಾರ್ ಸಾಹೇಬ

(ಆ) ರಹಮಾನ್ ಸಾಹೇಬ

(ಇ) ಇರ್ಫಾನ್ ಸಾಹೇಬ

(ಈ) ಖಾನ್ ಸಾಹೇಬ

10) ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣ

(ಅ) ಕಾಗದ ಪತ್ರಗಳನ್ನು ಬಟವಾಡೆ ಮಾಡಲು.

(ಆ) ಹುಚ್ಚುನಾಯಿ ಕಚ್ಚಿದ್ದರಿಂದ ಇಂಜೆಕ್ಷನ್ ಪಡೆಯಲು.

(ಇ) ಸ್ಟಾಕ್‌ಮನ್ ಪುಟ್ಟಯ್ಯನನ್ನು ಭೇಟಿ ಮಾಡಲು.

(ಈ) ಆನೆಯ ವಿಚಾರಗಳನ್ನು ನಿರೂಪಕರಿಗೆ ಹೇಳಲು.

**(ಆ)** ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5 × 1 = 5)**

(ಪ್ರಶ್ನೆ ಕೇಳುವುದು, ಸುಳ್ಳು, ಇಂದ್ರಭವನ, ಒಕ್ಕಲ ಮಕ್ಕಳ, ಭಾಷೆ, ಚಂದ್ರಭವನ)

11) ಕೊನೆಗೆ ಬಸಲಿಂಗ ___________ ಗಳಿಂದ ಮುಕ್ತನಾಗಿದ್ದ.

12) ಬದುಕು ___________ ಬಿಟ್ಟು ಇರುವುದಿಲ್ಲ.

13) ಧಣಿ ಎಂದಿಗೂ ___________ ನಂಬುವುದಿಲ್ಲ.

14) ವಿಜ್ಞಾನದ ಅಡಿಪಾಯ ___________.

15) ಲೇಖಕರು ಹೇಳುವ ಹಳ್ಳಿಯ ಹೋಟೇಲಿನ ಹೆಸರು ___________.

**(ಇ)** 16) ಹೊಂದಿಸಿ ಬರೆಯಿರಿ: **(5 × 1 = 5)**

| | |
|---|---|
| (ಅ) ಕೂಡಲಸಂಗಮದೇವಾ | 1. ಮುಕ್ತ ಕಂಠ |
| (ಆ) ಶತಕ | 2. ಜಾಲಿಯ ಮರದಂತೆ |
| (ಇ) ಪುರಂದರದಾಸರು | 3. ಚಿಟ್ಟೆ ಮತ್ತು ಜೀವಯಾನ |
| (ಈ) ಬೆಳಗು ಜಾವ | 4. ಬಸವಣ್ಣ |
| (ಉ) ಟಿ. ಯಲ್ಲಪ್ಪ | 5. ಜಿ.ಎಸ್. ಶಿವರುದ್ರಪ್ಪ |
| | 6. ಪಗೆಯಂ ಬಾಲಕನೆಂಬರೇ |

## ಆ–ವಿಭಾಗ

(ಅ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

17) ಸೀತೆಯ ತಲ್ಲಣಕ್ಕೆ ಕಾರಣವೇನು?

18) ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ?

19) ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?

20) ಸೊಸೆಗೆ ಹೊರಗಿನ ಕೆಲಸ ಬರಲೆಂದು ಮುದುಕಿ ಬಯಸಿದ್ದೇಕೆ?

(ಆ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(2 × 2 = 4)**

21) ಡಾ॥ ಚಂದ್ರಪ್ಪ ಬಸಲಿಂಗನಿಗೆ ಡಾ॥ ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

22) ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೇ ಇರುತ್ತವೆ ಎಂದು ಹಾಮಾನಾ ಅವರು ಹೇಳುತ್ತಾರೆ?

23) ಕಲಾಂ ಅವರ ಬದುಕಿನ ಮಂತ್ರ ಯಾವುದು?

24) ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

(ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

25) ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

26) ಫಾರೆಸ್ಟ್ ಡಿಪಾರ್ಟ್‌ಮೆಂಟಿನ ನಂಬರ್ ಒನ್ ಎನಿಮಿಗಳು ಯಾರು ಯಾರು?

27) ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?

28) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹಿರಾತು ನೀಡಿದರು?

## ಇ–ವಿಭಾಗ

(ಅ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2 × 3 = 6)**

29) ಕಲಿಭೀಮನೇ ಮಿಡುಕುಳ್ಳ ಗಂಡನು.

30) ಹಬ್ಬಲಿ ಅವರ ರಸಬಳ್ಳಿ.

31) ಯಾತನೆಗೂ ನಲ್ವಾತನೇ ನುಡಿವ ಮುಖಮುದ್ರೆ.

(ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(1 × 3 = 3)**

32) ನೀರು ಬಿದ್ದರೆ ಕಣ್ಣು ಕೆಟ್ಟುಹೋಗುವ ಅಪಾಯ ಇದೆ.

33) ನೋಡು ನಿನ್ನ ಎದುರು ಎರಡು ಆಯ್ಕೆಗಳಿವೆ.

34) ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

(ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(1 × 3 = 3)**

35) ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.

36) ಈ ಕಂಬದೊಳ್ಗೆ ಏನೋ ಸೇರ್‌ಕೊಂಡಿದೆ.

## ಈ–ವಿಭಾಗ

(ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(2 × 4 = 8)**

37) ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಹಾಗೂ ಬಹುರೂಪಿಣಿಯು ಪ್ರತ್ಯಕ್ಷವಾದ ಸಂದರ್ಭವನ್ನು ವಿವರಿಸಿ.

38) ಮಂಗಳಲಿಂಗದ ಮಹತ್ವವನ್ನು ಉರಿಲಿಂಗಪೆದ್ದಿಯ ವಚನದಲ್ಲಿ ಹೇಗೆ ವಿವರಿಸಲಾಗಿದೆ?

39) ಮುಂಬೈಜಾತಕ ಕವಿತೆಯ ಹಿನ್ನೆಲೆಯಲ್ಲಿ ನಗರ ಜೀವನವನ್ನು ವಿಶ್ಲೇಷಿಸಿ.

40) ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಹೆಂಡತಿಯ ಹರಿಬದಲಿಯೊಬ್ಬನೆ
ಗಂಡುಗೂಸೆ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು
ಗಂಡರೈವರು ಮೂರು ಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡರೋ ನೀವ್ ಭಂಡರೋ ಹೇಳೆಂದಳಿಂದುಮುಖಿ

ಅ) ಮೂರು ಲೋಕದ ಗಂಡರೆಂದು ಯಾರನ್ನು ಕರೆಯಲಾಗಿದೆ? (1 ಅಂಕ)

ಆ) 'ಗಂಡರೋ ನೀವ್ ಭಂಡರೊ' ಎಂದವರಾರು? (1 ಅಂಕ)

ಇ) ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ? (2 ಅಂಕ)

(ಆ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(1 × 4 = 4)**

41) ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪಾರೈಗೆ ಒದಗಿದ ಸಮಸ್ಯೆಗಳೇನು?

42) ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿವರಿಸಿ.

(ಇ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(1 × 4 = 4)**

43) ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

44) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವು ಹೇಗಾಯಿತು? ಅದಕ್ಕೆ ಆನೆ ಕಾರಣವೇ?

## ಉ–ವಿಭಾಗ

## (ಭಾಷಾಭ್ಯಾಸ)

(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಸೂಚನೆಗೆ ಅನುಗುಣವಾಗಿ ಉತ್ತರಿಸಿ. **(4 × 2 = 8)**

45) ಕೆಳಗಿನ ಎರಡು ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ.

ಮಾರ, ಕರ್ಮ, ಬಂಗಾರ

46) ಕೆಳಗಿನ ಎರಡು ಶಬ್ದಗಳಿಗೆ ತದ್ಭವ ರೂಪ ಬರೆಯಿರಿ.

ಯೋಗಿ, ಆಕಾಶ, ಅಮೃತ

47) ಕೆಳಗಿನ ಎರಡು ಪದಗಳ ಗುಣವಾಚಕಗಳನ್ನು ಗುರುತಿಸಿ ಬರೆಯಿರಿ.

ಹುಸಿನಿದ್ದೆ, ದುರ್ಗಂಧ, ಗಟ್ಟಿಪಾದ

48) ಕೆಳಗಿನ ಎರಡು ಕ್ರಿಯಾಪದಗಳ ಧಾತುರೂಪಗಳನ್ನು ಬರೆಯಿರಿ.

ನಿಂತನು, ಹಾಡುವರು, ಓದುವಳು

49) ಕೆಳಗಿನ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.

ಮೊಮ್ಮಗಳನ್ನು, ಗದ್ಯದೊಳ್, ಕೀರ್ತಿಗೆ

50) ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಮೊರೆಹೋಗು, ಗತಿಕಾಣಿಸು, ಮೂಗು ತೂರಿಸು

(ಆ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. **(1 × 4 = 4)**

51) ಹೆಚ್ಚುತ್ತಿರುವ ವೃದ್ಧಾಶ್ರಮಗಳು ಅದರಿಂದಾಗುವ ಪರಿಣಾಮಗಳು

**ಅಥವಾ**

ರಾಷ್ಟ್ರೀಯ ಹಬ್ಬಗಳ ಮಹತ್ವ

(ಇ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪತ್ರ ಬರೆಯಿರಿ. **(1 × 4 = 4)**

52) ರಮಾಬಾಯಿ/ಸುಭಾಷ್, ದ್ವಿತೀಯ ಪಿಯುಸಿ, ಅಂಬೇಡ್ಕರ್ ಪದವಿ ಪೂರ್ವ ಕಾಲೇಜು, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ. ಈ ವಿಳಾಸದಲ್ಲಿರುವವರು ನೀವೆಂದು ತಿಳಿದು ಗೌತಮ್/ಮಾನಸಾ, ದ್ವಿತೀಯ ಪಿಯುಸಿ, – ಸಂತ ಜೋಸೆಫರ ಪದವಿ ಪೂರ್ವ ಕಾಲೇಜು, ಅರಮನೆ ರಸ್ತೆ, ಮೈಸೂರು ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭವನ್ನು ಕುರಿತು ಪತ್ರ ಬರೆಯಿರಿ.

**ಅಥವಾ**

ರುಕ್ಮಿಣಿ/ಪ್ರಸನ್ನ, #45, ಕುವೆಂಪು ರಸ್ತೆ, ವಿವೇಕಾನಂದ ನಗರ, ಯಾದಗಿರಿ – 585201 ಇದು ನಿಮ್ಮ ವಿಳಾಸ ಎಂದು ಭಾವಿಸಿ ನಿಮ್ಮ ವಿವೇಕಾನಂದ ನಗರಕ್ಕೆ ಬಸ್ ಸಂಪರ್ಕ ವ್ಯವಸ್ಥೆ ಕಲ್ಪಿಸಿಕೊಡುವಂತೆ ಕೋರಿ – ಜಿಲ್ಲಾಧಿಕಾರಿಗಳು, ಮಿನಿ ವಿಧಾನಸೌಧ, ಯಾದಗಿರಿ ಜಿಲ್ಲೆ. ಇವರಿಗೆ ಪತ್ರ ಬರೆಯಿರಿ.

| ನೋಂದಣಿ ಸಂಖ್ಯೆ : Registration No. : | | | | | | | | | | | |
|---|---|---|---|---|---|---|---|---|---|---|---|

**X1 – 2025**

| ವಿಷಯ ಸಂಕೇತ / Subject Code | **01 (NS)** |
|---|---|

# ಕನ್ನಡ / KANNADA

[ಸಮಯ : 3 ಗಂಟೆಗಳು] [ಒಟ್ಟು ಪ್ರಶ್ನೆಗಳ ಸಂಖ್ಯೆ : 52] [ಗರಿಷ್ಠ ಅಂಕಗಳು : 80]

[Time : 3 Hours] [Total No. of questions : 52] [Max. Marks : 80]

**ಸೂಚನೆ : "ಅ–ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

## ಅ – ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10 × 1 = 10)**

1) ಮಯತನೂಜೆ ಯಾರೆಂದರೆ

(ಅ) ಸೀತೆ (ಆ) ಸಾವಿತ್ರಿ

(ಇ) ಮಂಡೋದರಿ (ಈ) ದ್ರೌಪದಿ

2) ಅನ್ಯಲಿಂಗವನ್ನು ನೆನೆಯದವರು.

(ಅ) ತೀರ್ಥಯಾತ್ರೆಗೆ ಹೋದವರು

(ಆ) ದೇವಾಲಯದಲ್ಲಿದ್ದವರು

(ಇ) ಸಾಮಾನ್ಯ ಭಕ್ತ

(ಈ) ಅಂಗದ ಮೇಲೆ ಲಿಂಗ ಧರಿಸಿದವನು

3) ಹೆಂಡತಿಯ ಹರಿಬದಲಿಯೊಬ್ಬನೆ
ಗಂಡುಗೂಸೆ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು

– ಈ ಪದ್ಯಭಾಗದಲ್ಲಿ ದ್ರೌಪದಿ ಯಾವ ವಿಚಾರ ತಿಳಿಸಿದ್ದಾಳೆ?

(ಅ) ಧರ್ಮರಾಯನ ಧರ್ಮಪರತೆ

(ಆ) ಗಂಡನ ಕರ್ತವ್ಯ

(ಇ) ಕೀಚಕನಿಂದಾಗುತ್ತಿರುವ ತೊಂದರೆ

(ಈ) ವೈರಿಯ ನಡೆ

4) ದುರ್ಗಂಧ ಬಿಡದಿರುವುದು ಯಾವುದು?

(ಅ) ಊರ ಹಂದಿ (ಆ) ಜಾಲಿಯ ಮರ

(ಇ) ಊರ ನಾಯಿ (ಈ) ಕಾಡು ಹಂದಿ

5) ಹೊರಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ಯಾರು?

(ಅ) ಅಕ್ಕ (ಆ) ತಾಯಿ

(ಇ) ತಂಗಿ (ಈ) ಅಜ್ಜಿ

6) 'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ನೇಮಿಚಂದ್ರ ಭೇಟಿ ಮಾಡಿದ್ದು.

(ಅ) ಪ್ಲೇವಿಯಾ ಮತ್ತು ಸೀತಾ

(ಆ) ನಿಶಾಶರ್ಮ ಮತ್ತು ಪ್ಲೇವಿಯಾ

(ಇ) ಕಮಲ ಮೇಡಂ ಮತ್ತು ಮುದ್ದೇಗೌಡ

(ಈ) ಸೀತಾ ಮತ್ತು ನಿಶಾಶರ್ಮ

7) "ತಾನು ಹರಿದು ಬರುವಾಗಲೆಲ್ಲಾ ತನ್ನ ಸೆರಗಂಚಿನಲ್ಲಿರುವ ತೋಟಗಳಿಂದ ಆಗ್ಗಾಗ್ಗೆ ಅಷ್ಟಿಷ್ಟು ತೆಂಗಿನಕಾಯಿ – ಸೌದೆ ಕಟ್ಟಿಗೆಗಳನ್ನು ತಂದು ಕುದುಪನ ದಿಟ್ಟಿಗೆ ಅವನ್ನೆಲ್ಲ ಬೀಳಿಸುತ್ತಿಲ್ಲವೆ!" – ಧಣಿಗಳ ಬೆಳ್ಳಿಲೋಟ ಗದ್ಯದ ಈ ಸಾಲುಗಳು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತವೆ?

(ಅ) ಚಿನ್ನಮ್ಮನ ಬೈಗುಳದಿಂದ ತಪ್ಪಿಸಿಕೊಳ್ಳಲು ಹೊಳೆಯ ಹುನ್ನಾರ

(ಆ) ವೆಂಕಪ್ಪಯ್ಯನ ಕುಟುಂಬದ ಬಗ್ಗೆ ಹೊಳೆಗೆ ಇದ್ದ ಕಾಳಜಿ

(ಇ) ಕುದುಪನ ಕುಟುಂಬದ ಬಗ್ಗೆ ಹೊಳೆಗೆ ಇದ್ದ ಅಸಹನೆ

(ಈ) ಕುದುಪನ ಕುಟುಂಬದ ಬಗ್ಗೆ ಹೊಳೆಗೆ ಇದ್ದ ಕಾಳಜಿ

8) ನಿರೂಪಕರ ಗೆಳೆಯ ಪ್ರಕಾಶ

(ಅ) ಸೈಕಾಲಜಿಸ್ಟ್ (ಆ) ಇಕಾಲಜಿಸ್ಟ್

(ಇ) ಕಾರ್ಡಿಯಾಲಜಿಸ್ಟ್ (ಈ) ಸೈಕಿಯಾಟ್ರಿಸ್ಟ್

9) "ಅಲ್ರಿ ನಾಗರಾಜ್ ಇವು ಯಾವುದಾದರೂ ತೀರ್ಮಾನ ಆಗೋ ಕೇಸುಗಳೇನ್ರಿ. ನೀವು ಬೇರೆ ಡಿಪಾರ್ಟ್‌ಮೆಂಟಿಗೆ ಬುದ್ಧಿ ಕಲಿಸ್ತೀನಿ ಅಂದ್ರಲ್ಲಾ ಹಾಗೇ ಅವರೂನು ನಿಮಗೆ ಕಲಿಸಬೇಕು ಅಂತಿರ್ತಾರೆ. ಕಲಿಯೋದಕ್ಕೆ ಯಾರಾದರೂ ತಯ್ಯಾರಿದ್ರೆ ತಾನೆ ಕೇಸು ತೀರ್ಮಾನ ಆಗೋದು" – ಹೀಗೆಂದು ನಿರೂಪಕರು ನಾಗರಾಜನಿಗೆ ಹೇಳಿದ ಮಾತಿನಲ್ಲಿ ವ್ಯಕ್ತವಾಗುವ ಭಾವ.

(ಅ) ಡಿಪಾರ್ಟ್‌ಮೆಂಟ್‌ಗಳ ಮಧ್ಯದ ಹೊಂದಾಣಿಕೆಯ ಕೊರತೆ

(ಆ) ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಸರಿಯಾದ ಕ್ರಮ

(ಇ) ಡಿಪಾರ್ಟ್‌ಮೆಂಟ್‌ಗಳ ಮಧ್ಯದ ಹೊಂದಾಣಿಕೆ

(ಈ) ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ನಿರ್ಲಕ್ಷ್ಯ

10) ನಾಗರಾಜ ಕೋವಿ ಹಿಡಿದು ಕುಳಿತಿದ್ದು ಎಲ್ಲಿ?

(ಅ) ಶಿಕಾರಿ ಗುಂಡಿ (ಆ) ಶಿಕಾರಿ ಬಂಡಿ

(ಇ) ಶಿಕಾರಿ ಗಂಡಿ (ಈ) ಶಿಕಾರಿ ಮಂಡಿ

(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5 × 1 = 5)**

(ದ್ವೀಪಜೀವಿಗಳಾಗಿ, ಮಗು, ಚಂದ್ರಭವನ, ವಾತ್ಸಾಯನ, ಚಹಾಗಿಡ, ಮುದ್ದಣ)

11) ವಾಲ್‌ಪರ್ಶೆಗೆ ದುರಂತದ ಮೂಲಬೀಜಗಳು __________ ರೂಪದಲ್ಲಿ ಬಂದವು.

12) ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು __________ ಉಳಿಯಬೇಕಾಗುತ್ತದೆ.

13) ಭೂಮಿಯ ಮೇಲಿನ ಮೊದಲ ವಿಜ್ಞಾನಿ __________.

14) ಶೇಷನು ರಾಮಾಯಣದ ಕತೆಯನ್ನು __________ನಿಗೆ ಹೇಳಿದನು.

15) ವೀರೇಂದ್ರ ಸಿಂಪಿಯವರು ಹೇಳುವ ಹಳ್ಳಿಯ ಚಹಾ ಹೊಟೇಲಿನ ಹೆಸರು __________.

(ಇ) ಹೊಂದಿಸಿ ಬರೆಯಿರಿ. **(5 × 1 = 5)**

| | | | |
|---|---|---|---|
| 16) (ಅ) | ಪುರಂದರದಾಸ | 1) | ಕೆ.ಎಸ್. ನಿಸಾರ್ ಅಹಮದ್ |
| (ಆ) | ಬೆಳಗು ಜಾವ | 2) | ಹತ್ತಿ.....ಚಿತ್ತ.....ಮತ್ತು |
| (ಇ) | ಶಿಲುಬೆ ಏರಿದ್ದಾನೆ | 3) | ಜಿ.ಎಸ್. ಶಿವರುದ್ರಪ್ಪ |
| (ಈ) | ಚಿಟ್ಟೆ ಮತ್ತು ಜೀವಯಾನ | 4) | ಕೀರ್ತನೆ |
| (ಉ) | ಸುಕನ್ಯಾ ಮಾರುತಿ | 5) | ಮುಕ್ತಕಂಠ |
| | | 6) | ಒಮ್ಮೆ ನಗುತ್ತೇವೆ |

## ಆ – ವಿಭಾಗ

II. (ಅ) **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

17) ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?

18) ಗಂಡರ್ರೈವರು ಮೂರುಲೋಕದ ಗಂಡರಾರು? ಹೆಸರಿಸಿ.

19) ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?

20) ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

(ಆ) **ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(2 × 2 = 4)**

21) ಹೆಂಡ್ತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?

22) ಕನ್ನಡದ ಬಗ್ಗೆ ಮಾತಾಡಲು ನಾವು ಯೋಗ್ಯತೆ ಗಳಿಸುವುದು ಯಾವಾಗ?

23) ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

24) ರೋಗಿಗಳ ಹಾಗೂ ಪಥ್ಯಮಾಡುವವರ ಜಿದ್ದು ಎಂತಹುದು?

(ಇ) **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

25) ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

26) ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

27) ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

28) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ – ವಿಭಾಗ

III. (ಅ) **ಯಾವುದಾದರೂ ಎರಡು** ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2 × 3 = 6)**

29) ನೀ ತಂಪ ನನ್ನ ತವರೀಗಿ.

30) ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು.

31) 'ಮಾತೇ ಮರೆತು ಹೋಗಿದೆ ಕಣೆ'.

(ಆ) **ಯಾವುದಾದರೂ ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

32) ಹಾಡುವುದು ಅವುಗಳಿಗೆ ಅನಿವಾರ್ಯ, ಅವುಗಳ ಕರ್ಮ!

33) ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು.

34) ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

(ಇ) **ಯಾವುದಾದರೂ ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

35) ಡ್ರೈವರಣ್ಣ ಎತ್ಲಾಗಿ ಹೋದ ! ಇಲ್ಲೇ ಇದ್ದನಲ್ಲ !

36) ಈ ಕಂಬದೊಳ್ಗೆ ಏನೋ ಸೇರ್‌ಕೊಂಡಿದೆ.

## ಈ – ವಿಭಾಗ

IV. (ಅ) **ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(2 × 4 = 8)**

37) ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ನಿರೂಪಿಸಿದ್ದಾನೆ? ವಿವರಿಸಿ.

38) ಶಿವಪಥವನ್ನರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣ ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ?

39) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

40) ಇರಿಯಲ್ಬಲ್ಲೊಡೆ ವೀರನಾಗು ಧರೆಯೊಳ್ ನಾನಾ ಚಮತ್ಕಾರಮಂ।
ಅರಿಯಲ್ಬಲ್ಲೊಡೆ ಮಂತ್ರಿಯಾಗು ವಿಭುವಾಗಾರೆಂದೊಡಂ ಕೋಪಮಂ॥
ತೊರೆಯಲ್ಬಲ್ಲೊಡೆ ಯೋಗಿಯಪ್ಪುದರಿ ಷಡ್ವರ್ಗಂಗಳಂ ಗೆಲ್ವೊಡೇ।
ತೆರ ಬಲ್ಲರ್ಪೊಣೆಯಪ್ಪುದೈ ಹರಹರಾ ಶ್ರೀ ಚೆನ್ನಸೋಮೇಶ್ವರಾ॥

– ಮೇಲಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

(ಅ) ವೀರನಾದವನು ಏನನ್ನು ಬಲ್ಲವನಾಗಿರಬೇಕು? **(1 ಅಂಕ)**

(ಆ) ಯಾರನ್ನು ಯೋಗಿ ಎನ್ನಬಹುದು? **(1 ಅಂಕ)**

(ಇ) ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ? **(2 ಅಂಕಗಳು)**

(ಆ) **ಯಾವುದಾದರೂ ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(1 × 4 = 4)**

41) ಬಸಲಿಂಗ ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು? ವಿವರಿಸಿ.

42) ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು?

(ಇ) **ಯಾವುದಾದರೂ ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(1 × 4 = 4)**

43) ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ? ವಿವರಿಸಿ.

44) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡನ ಆನೆ ಕಾರಣವೇ? ವಿವರಿಸಿ.

## ಉ – ವಿಭಾಗ

## (ಭಾಷಾಭ್ಯಾಸ)

V. (ಅ) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. **(4 × 2 = 8)**

45) ಎರಡು ಪದಗಳ ನಾನಾರ್ಥಗಳನ್ನು ಬರೆಯಿರಿ.

ಬಟ್ಟೆ, ಕವಿ, ಅರಿ

46) ಎರಡು ಪದಗಳ ಗುಣವಾಚಕಗಳನ್ನು ಬರೆಯಿರಿ.

ಕಲಿಭೀಮ, ಗಟ್ಟಿಪಾದ, ಶ್ರೇಷ್ಠವಿಜ್ಞಾನಿ

47) ಎರಡು ಪದಗಳ ತದ್ಭವ ರೂಪ ಬರೆಯಿರಿ.

ಯೋಗಿ, ಪರೀಕ್ಷಿಸು, ಯಶ

48) ಎರಡು ಕ್ರಿಯಾಪದಗಳ 'ಧಾತು' ಗುರುತಿಸಿ.

ಓದಿದನು, ಬೀಸುತ್ತಿತ್ತು, ಹಾಡುವಳು

49) ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಕಾಲುಕೀಳು, ರಾಮಬಾಣ, ಗಾಳಿಸುದ್ದಿ

50) ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

(ಆ) **ಯಾವುದಾದರೂ ಒಂದು** ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ. **(1 × 4 = 4)**

51) ವಿದ್ಯಾರ್ಥಿ ಜೀವನದಲ್ಲಿ ಗ್ರಂಥಾಲಯದ ಮಹತ್ವ.

**ಅಥವಾ**

ವಿಶ್ವಚದುರಂಗ (ಚೆಸ್) ದಲ್ಲಿ ಭಾರತೀಯರ ಸಾಧನೆ.

(ಇ) ಇವುಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪತ್ರ ಬರೆಯಿರಿ. **(1 × 4 = 4)**

52) ಮಂಜುಳಾ/ಮಂಜೇಶ್, ದ್ವಿತೀಯ ಪಿಯುಸಿ, ಶಾರದ ಪದವಿ ಪೂರ್ವ ಕಾಲೇಜು, ಪಾವಗಡ, ತುಮಕೂರು ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ನಟರಾಜ ಕುವೆಂಪು ರಸ್ತೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಅನುಮತಿ ಹಾಗೂ ಹಣ ಕೋರಿ ಪತ್ರ ಬರೆಯಿರಿ.

**ಅಥವಾ**

ಶಿವಾಂಗಿ/ಆನಂದ, ದ್ವಿತೀಯ ಪಿಯುಸಿ, ಸೆಂಟ್ ತೆರೇಸಾ ಪದವಿ ಪೂರ್ವ ಕಾಲೇಜು, ಹೂವಿನ ಹಡಗಲಿ, ವಿಜಯಪುರ ಜಿಲ್ಲೆ ಈ ಕಾಲೇಜಿನಲ್ಲಿ ಓದುತ್ತಿರುವವರು ನೀವೆಂದು ಭಾವಿಸಿ, ನಿಮ್ಮ ಸಹೋದರ/ಸಹೋದರಿಯ ವಿವಾಹದಲ್ಲಿ ಪಾಲ್ಗೊಳ್ಳಲು ನಾಲ್ಕು ದಿನದ ರಜೆಗಾಗಿ ಅನುಮತಿ ಕೋರಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ.

| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

**A2 – 2024**

| ವಿಷಯ ಸಂಕೇತ Subject Code | **01** |
|---|---|

# ಕನ್ನಡ / KANNADA

ಸಮಯ: 3 ಗಂಟೆ 15 ನಿಮಿಷಗಳು (ಒಟ್ಟು ಪ್ರಶ್ನೆಗಳ ಸಂಖ್ಯೆ : 56) ಗರಿಷ್ಠ ಅಂಕಗಳು: 80

Time : 3 Hours 15 Minutes] [Total No. of Questions : 56] [Max. Marks : 80

**ಸೂಚನೆ :**

I. ಅ–ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ–ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ: **(10 × 1 = 10)**

1) ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು?

(a) ಸೀತೆಯ ಬಗ್ಗೆ (b) ರಾಮನ ಬಗ್ಗೆ

(c) ಲಕ್ಷ್ಮಣನ ಬಗ್ಗೆ (d) ವಿಭೀಷಣನ ಬಗ್ಗೆ

2) ಯಾರ ಕೈಯಲ್ಲಿ ಚಂದ್ರಾಯುಧವಿದ್ದು ಫಲವಿಲ್ಲ?

(a) ಅಂಧಕನ ಕೈಯಲ್ಲಿ (b) ಹಂದೆಯ ಕೈಯಲ್ಲಿ

(c) ಮರ್ಕಟನ ಕೈಯಲ್ಲಿ (d) ಶರಣರ ಕೈಯಲ್ಲಿ

3) ಬಸುರ ಬಗೆವೆನು ಕೀಚಕನ ನಸು
ಮಿಸುಕಿದೊಡೆ ವೈರಾಟ ವಂಶದ
ಹೆಸರ ತೊಡೆವೆನು ನಮ್ಮನರಿದೊಡೆ ಕೌರವ ಪ್ರಜವ
ಕುಸುರಿದರಿವೆನು ___ ಇಲ್ಲಿ ನಮ್ಮನು ಎಂದರೆ ಯಾರು?

(a) ಕೌರವರು (b) ಯಾದವರು

(c) ಪಾಂಡವರು (d) ದೇವತೆಗಳು

4) ಎಂತಹ ನೆರೆಯವರು ಇರಬೇಕು?

(a) ಕಳ್ಳರ ನೆರೆ (b) ಸುಳ್ಳುಗಾರರ ನೆರೆ

(c) ಬುದ್ಧಿವಂತರ ನೆರೆ (d) ಮಂದಮತಿಗಳ ನೆರೆ

5) ಯಾವ ಮರದ ರಸವು ವಿಷವಾಗಿರುತ್ತದೆ?

(a) ಆಲದಮರದ ರಸ (b) ಮಾವಿನ ಮರದ ರಸ

(c) ಹೊಂಗೆ ಮರದ ರಸ (d) ಜಾಲಿಯ ಮರದ ರಸ

6) ಹಾಡುವ ಹಕ್ಕಿಯ ಹೆಸರೇನು?

(a) ಕೊಂಬುಕೊಕ್ಕಿನ ಹಕ್ಕಿ (b) ವಿಷಲಿಂಗ್ ಥ್ರಷ್

(c) ನವಿಲು (d) ಗಿಳಿ

7) ತಮಗೆ ಸಿಕ್ಕಿದ ಬೆಳ್ಳಿಲೋಟವನ್ನು ಚಿನ್ನಮ್ಮ ಮತ್ತೆ ಹೊಳೆಯ ಮಡುವಿಗೆ ಎಸೆದು, ಹೊಳೆಯ ನೀರಲ್ಲೊಮ್ಮೆ ಸಂಪೂರ್ಣವಾಗಿ ಮುಳುಗಿ ಎದ್ದು ನಿಂತಳು – ಈ ಸಾಲುಗಳಲ್ಲಿ ವ್ಯಕ್ತವಾಗಿರುವ ಅಂಶವನ್ನು ಗುರುತಿಸಿ.

(a) ಅಪವಾದದಿಂದ ಮುಕ್ತಳಾದ ಭಾವ (b) ಬೇಸಿಗೆಯ ತಾಪವನ್ನು ತಾಳಲಾರದೆ

(c) ಸ್ನಾನ ಮಾಡಲೆಂದು (d) ಮಡುವಿನ ಆಳ ನೋಡಲು

8) ಆನೆ ಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

(a) ಐದು ಜನ ಸಾಯುತ್ತಾರೆ (b) ಆರು ಜನ ಸಾಯುತ್ತಾರೆ

(c) ಏಳು ಜನ ಸಾಯುತ್ತಾರೆ (d) ಎಂಟು ಜನ ಸಾಯುತ್ತಾರೆ

9) ಶಿವೇಗೌಡರು ರಾತ್ರೋ ರಾತ್ರಿ ಆನೆಯನ್ನು ಕರೆದುಕೊಂಡು ಹೋದುದೇಕೆ?

(a) ಆನೆಯನ್ನು ಕೊಲ್ಲಲು (b) ಕಳ್ಳನಾಟ ಇಳಿಸಲು

(c) ಆನೆಯನ್ನು ಮಾರಲು (d) ಆನೆಯನ್ನು ಕಾಡಿಗೆ ಓಡಿಸಲು

10) ಆನೆ ಅಷ್ಟು ದೊಡ್ಡ ಪ್ರಾಣಿಯಾದರೂ ಸುಳಿವೇ ಕೊಡದೆ ತಂಗಾಳಿಯಂತೆ ಓಡಾಡಬಲ್ಲದು ಎನ್ನುವುದು ನಾಗರಾಜನ ಸರ್ವಿಸ್ಸಿನಲ್ಲಿ ಎಷ್ಟೋ ಸಾರಿ ಗಮನಕ್ಕೆ ಬಂದಿತ್ತು. ಅದಕ್ಕೆ ಅವನು 'ಮೈಯೆಲ್ಲಾ ಕಣ್ಣಾಗಿ' ಕುಳಿತಿದ್ದ – ಇಲ್ಲಿ 'ಮೈಯೆಲ್ಲಾ ಕಣ್ಣಾಗಿ' ಕುಳಿತಿದ್ದ ಎನ್ನುವುದು ಏನನ್ನು ಸೂಚಿಸುತ್ತದೆ?

(a) ವಿಶ್ರಾಂತಿಗಾಗಿ ಕೂರುವುದು

(b) ಮೈಮರೆತು ಕೂರುವುದು

(c) ಉದಾಸೀನದಿಂದ ಕೂರುವುದು

(d) ಪೂರ್ಣ ಎಚ್ಚರದಿಂದ ಗಮನಿಸುವುದು

(ಆ) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: (5 × 1 = 5)

(ರಾಮಾಶ್ವಮೇಧ, ವಿಂಗ್ಸ್ ಆಫ್ ಫೈರ್, ಅದೃಷ್ಟದ ಸಿನಿಮಾ, ಮಹಾಭಾರತ, ತಬ್ಬಲಿ)

11) ಸೀತಾಳಿಗೆ ಬದುಕು ……………… ಆಟದಂತೆ ಕಾಣುತ್ತಿತ್ತು.

12) ಅಬ್ದುಲ್ ಕಲಾಂ ಆವರು ಬರೆದ ಆತ್ಮ ಕಥೆ……………

13) ಮನೋರಮೆಯು ಮುದ್ದಣನಿಂದ ಕೇಳಲು ಬಯಸಿದ ಕಥೆ …………

14) ಹಳ್ಳಿಯ ಹೋಟೇಲುಗಳಲ್ಲಿ ಈಗ ………… ದೇವತೆಗಳ ದರ್ಶನವೂ ಆಗುತ್ತದೆ.

15) ಕನ್ನಡಿಗರು ತಮ್ಮ ರಾಜ್ಯದಲ್ಲಿ ತಾವೇ …………… ಗಳಾಗುತ್ತಿದ್ದಾರೆ.

(ಇ) ಹೊಂದಿಸಿ ಬರೆಯಿರಿ: (5 × 1 = 5)

| | |
|---|---|
| 16) ಬೆಳಗು ಜಾವ | ಅ) ರಾಷ್ಟ್ರಕವಿ |
| 17) ಜಿ.ಎಸ್. ಶಿವರುದ್ರಪ್ಪ | ಆ) ಜನಗಳಿಗೆ ನೀರಿಲ್ಲ |
| 18) ಕೆ.ಎಸ್. ನಿಸಾರ್ ಅಹಮದ್ | ಇ) ಚಿಟ್ಟೆ ಮತ್ತು ಜೀವಯಾನ |
| 19) ಟಿ. ಯಲ್ಲಪ್ಪ | ಈ) ಜೋಗದ ಜೋಕು ಕವನದ ಕವಿ |
| 20) ದನಗಳಿಗೆ ಮೇವಿಲ್ಲ | ಉ) ಕನ್ನಡದ ಸಾನೆಟ್ ಪ್ರಕಾರ |
| | ಊ) ನಿತ್ಯೋತ್ಸವ ಕವಿ |

## ಆ–ವಿಭಾಗ

II. (ಅ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: (3 × 2 = 6)

21) ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೋಷಿಸಿದನು?

22) ಬಡತನ ಹೇಗೆ ಬಯಲಾಯಿತು?

23) ಹುಸಿನಿದ್ದೆ ಸಾಕು ಎದ್ದೇಳಿ ಎಂದು ಕವಿ ಮಕ್ಕಳಿಗೆ ಹೇಳಲು ಕಾರಣವೇನು?

24) ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ ಏನನ್ನು ಅನ್ನುವಂತಿದೆ?

(ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(2 × 2 = 4)**

25) ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಏಕೆ?

26) ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?

27) ಸಂಸ್ಕೃತ–ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?

28) ಗಿಡ್ಡ ಮಾಸ್ತರರು ಶಾಲೆಯಲ್ಲಿ ಹುಡುಗರಿಗೆ ಏಕೆ ಹೊಡೆಯುತ್ತಾರೆ?

(ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(3 × 2 = 6)**

29) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸವಾದುದೇಕೆ?

30) ನಾಯಿಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

31) ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?

32) ಕಾಡಾನೆಗಳ ಹಾವಳಿಗೆ ಕೃಷ್ಣೇ ಗೌಡರ ಆನೆ ಕಾರಣವಲ್ಲ ಎನ್ನುವ ಪ್ರಕಾಶರ ಹೇಳಿಕೆಯನ್ನು ಸಮರ್ಥಿಸಿ?

## ಇ–ವಿಭಾಗ

III. (ಅ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(2 × 3 = 6)**

33) ನೀನಲ್ಲದುಳಿದವರುಚಿತ ಬಾಹಿರರು.

34) ರಸ್ತೆ ದಾಟುವಾಗೆಚ್ಚರಿಕೆ.

35) ಎಷ್ಟುಸಲವಮ್ಮ ಹೇಳುವುದು ನಿನಗೆ.

(ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

36) ಹಿಂದಿ–ಇಂಗ್ಲೀಷ್ ಬಾರದವರು ವಿಮಾನ ಪ್ರಯಾಣ ಮಾಡಬಾರದೆ?

37) ಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು.

(ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

38) ಆನೆ ಸಾಕುವುದೆಂದರೆ ಎಲೆಕ್ಷನ್‌ಗೆ ನಿಂತಹಾಗೆ.

39) ಕೋವಿ ಸಿಕ್ಕಿದೆ ಆದರೆ ಹೆಣ ಸಿಗಲಿಲ್ಲ.

**ಈ–ವಿಭಾಗ**

IV. (ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ : **(2 × 4 = 8)**

40) ಪ್ರಮದ ವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ?

41) ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?

42) ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

43) ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾನೆ?

(ಆ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ: **(1 × 4 = 4)**

44) ಬಸಲಿಂಗನಿಗೆ ಸಿಟ್ಟುಬರಲು ಕಾರಣವೇನು? ಅದನ್ನು ಆತ ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ?

45) ರಜೆಗೆಂದು ಮೈಸೂರಿಗೆ ಹೋದಾಗ ಲೇಖಕಿಯ ಪತಿಗಾದ ತೊಂದರೆಯೇನು?

46) ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿ ಬಯಸುವುದೇಕೆ?

(ಇ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ: **(1 × 4 = 4)**

47) ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿಹಾಕಿದರು?

48) ಪೋಸ್ಟ್‌ಮೆನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

## ಭಾಷಾಭ್ಯಾಸ

V. (ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಸೂಚನೆಗೆ ಅನುಗುಣವಾಗಿ ಉತ್ತರಿಸಿ: **(4 × 2 = 8)**

49) ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ:

ಸೂಳ್, ನೆನೆ, ಹದ್ದು

50) ಕೆಳಗಿನ ಎರಡು ಶಬ್ದಗಳಿಗೆ ತದ್ಭವ ರೂಪ ಬರೆಯಿರಿ:

ಭಿಕ್ಷಾ, ಯಶ, ಪರೀಕ್ಷಿಸು

51) ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.

ಅಜ್ಜನ ಕಾಲದ್ದು, ಸಿಂಹಸ್ವಪ್ನ, ಒಣಜಂಬ

52) ಕೆಳಗಿನ ಎರಡು ಶಬ್ದಗಳ ಗುಣವಾಚಕಗಳನ್ನು ಬರೆಯಿರಿ:

ಶ್ರೇಷ್ಠ ವಿಜ್ಞಾನಿ, ಪರದೇಶಿ, ದಯಾಮೃತ್ಯು

53) ಕೆಳಗಿನ ಎರಡು ಶಬ್ದಗಳ ವಿಭಕ್ತಿ ಪ್ರತ್ಯಯವನ್ನು ಹೆಸರಿಸಿ.

ಕುದುಪನನ್ನು, ಹರೆಯಕ್ಕೆ, ಧರೆಯೊಳ್

54) ಕೆಳಗಿನ ಎರಡು ಕ್ರಿಯಾಪದಗಳ ಕಾಲ ಸೂಚಕವನ್ನು ಬರೆಯಿರಿ.

ಹೋಗುವವರು, ನೋಡುತ್ತಾಳೆ, ಹೇಳಿದರು

(ಆ) ಯಾವುದಾದರೂ **ಒಂದನ್ನು** ಕುರಿತು ಪ್ರಬಂಧ ಬರೆಯಿರಿ: **(1 × 4 = 4)**

55) ಹೆಣ್ಣು ಭ್ರೂಣಹತ್ಯೆಯಿಂದ ಎದುರಾಗುವ ಸಮಸ್ಯೆಗಳು

**ಅಥವಾ**

ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವ ಜನರ ಪಾತ್ರ.

(ಇ) ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ: **(1 × 4 = 4)**

(ಯಾವುದೇ ಪತ್ರದಲ್ಲಿ ಹೆಸರನ್ನು ನಮೂದಿಸಬಾರದು; ಸಂಕೇತಾಕ್ಷರಗಳನ್ನು ಮಾತ್ರ ಬಳಸಬೇಕು. ಉದಾಹರಣೆಗೆ : ಅ.ಬ.ಕ)

56) ನಿಮ್ಮ ಪ್ರದೇಶದ ಬರಗಾಲವನ್ನು ವಿವರಿಸಿ ಬರಪರಿಹಾರ ನೀಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ತಂದೆ / ತಾಯಿಗೊಂದು ಪತ್ರ ಬರೆಯಿರಿ.

| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

**A3 – 2024**

ವಿಷಯ ಸಂಕೇತ Subject Code **01**

# ಕನ್ನಡ / KANNADA

ಸಮಯ: 3 ಗಂಟೆ 15 ನಿಮಿಷಗಳು (ಒಟ್ಟು ಪ್ರಶ್ನೆಗಳ ಸಂಖ್ಯೆ : 56) ಗರಿಷ್ಠ ಅಂಕಗಳು: 80

Time : 3 Hours 15 Minutes] [Total No. of Questions : 56] [Max. Marks : 80

**ಸೂಚನೆ :**

I. ಅ–ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ–ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ: **(10 × 1 = 10)**

1) ಮಯತನೂಜೆ ಎಂದರೆ ಯಾರು?

(a) ಸೀತೆ (b) ಮಂಡೋದರಿ

(c) ದ್ರೌಪದಿ (d) ಊರ್ಮಿಳಾ

2) ಯಾವುದರಿಂದ ಪರಿಮಳವನ್ನು ಅರಿಯಬಹುದು?

(a) ಪುಷ್ಪ (b) ಗಂಧ

(c) ಫಲ (d) ಮಣ್ಣು

3) ಅರಸಿ ಬಿಡು ಬಿಡು ಖಾತಿಯನು
ವಿಸ್ತರಿಸಲೇಕೆಮ್ಮಣ್ಣನಾಜ್ಞೆಯ
ಗೆರೆಯ ದಾಂಟಿದೆ ದಾಂಟಿಪೆನು ಹೋಗೆಂದನಾ ಭೀಮ.
ಈ ಪದ್ಯಭಾಗದಲ್ಲಿ ಭೀಮನ ಮಾತಿನ ಅರ್ಥವೇನು?

(a) ಪ್ರತಿಕಾರದ ಪ್ರತಿಜ್ಞೆ (b) ಭೀಮನ ಕೋಪ

(c) ಭೀಮನ ಅಸಹಾಯಕತೆ (d) ಭೀಮನ ಹುಸಿಕೋಪ

4) ಜಾನಪದ ಗರತಿಯ ಪ್ರಕಾರ ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?

(a) ಅಡಿಕೆ ಮರ (b) ಬೇವಿನ ಮರ

(c) ತೆಂಗಿನ ಮರ (d) ಮಾವಿನ ಮರ

5) ಯಾವುದು ಚಿಂತನದಿ ಮುಳುಗಿರಲಿ ಎಂದು ಕವಿ ಬೇಂದ್ರೆ ಆಶಿಸಿದ್ದಾರೆ?

(a) ಬಾಲ್ಯ (b) ಘುಪ್ಪು

(c) ಹರೆಯ (d) ಜೀವನ

6) ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?

(a) ಸೀತಾ (b) ನಿಶಾಶರ್ಮ

(c) ಪ್ಲೇವಿಯಾ (d) ಕಮಲಾಮೇಡಂ

7) ಕಾದು ಬತ್ತಿರುವ ಹೊಳೆಯಿಂದ ಹೂಳೆತ್ತಿ ತಂದು ತೆಂಗಿನ ತೋಟಕ್ಕೆ ಹಾಕಬೇಕೆಂದು ಧಣಿಗಳು ಕುದುಪನಿಗೆ ಸೂಚನೆ ನೀಡುತ್ತಿದ್ದರು. ಧಣಿಗಳ ಮಾತು ಚೆನ್ನಮ್ಮನ ಕಿವಿಗೂ ತಲುಪುತ್ತಿದೆ. ಆದರೆ ಅದು ತನಗಲ್ಲ ತನ್ನ ಕಿವಿ ಬೀಳಿನ ಬುಗುಡಿಗೆ ಎಂಬಂತೆ ತಾನು ಧಣಿಗಳ ಮನೆಯ ಮುಸುರೆ ಪಾತ್ರೆ ತಿಕ್ಕುತ್ತಾ ಹೊಳೆಯ ಬಗ್ಗೆಯೇ ತಲೆ ಕೆಡಿಸಿಕೊಳ್ಳುತ್ತಿದ್ದಳು – ಈ ಸಾಲುಗಳಲ್ಲಿ ಕಾಣುವ ಚೆನ್ನಮ್ಮನ ಮನಸ್ಥಿತಿ ....................

(a) ಚೆನ್ನಮ್ಮನ ಅಸಹಾಯಕತೆ, ನೋವು (b) ಕುದುಪನ ಚಿಂತೆ

(c) ಕಿವಿ ಕೇಳಿಸುತ್ತಿಲ್ಲ (d) ಚೆನ್ನಮ್ಮನ ಅಹಂಕಾರ

8) ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು ?

(a) ಗೂಳೂರು ಮಠ (b) ಶೃಂಗೇರಿ ಮಠ

(c) ಸಿದ್ಧಗಂಗಾ ಮಠ (d) ಚುಂಚನಗಿರಿ ಮಠ

9) ಆನೆಯ ಮಾವುತನ ಹೆಸರೇನು?

(a) ತಿಪ್ಪಣ್ಣ (b) ಪುಟ್ಟಯ್ಯ

(c) ವೇಲಾಯುಧ (d) ಜಬ್ಬಾರ್

10) ''ಏನು ಸ್ವಾಮಿ, ಸಾಯೋದಕ್ಕೆ ಹೆದರೋವ ನಾನು ಅಂತ ತಿಳುಕೊಂಡ್ರ? ಲೈನ್‌ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ? ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರಾದ್ರೂ ಈವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ? ಕರೆಂಟಿನ ಜೊತೆ ಕೆಲಸ ಅದು. ಒಂದಲ್ಲ ಒಂದು ದಿನ ಎಚ್ಚರ ತಪ್ಪಿದ್ರೂ ಅಲ್ಲಿಗೆ ನಮ್ಮ ಸರ್ವಿಸ್ ಮುಗಿದಂಗೇ ಅಲ್ವಾ'' – ಎಂದು ತನ್ನ ಕೆಲಸದ ಬಗ್ಗೆ ದುರ್ಗಪ್ಪ ಯಾವ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ?

(a) ಅಸಹನೆ (b) ಅಪಾಯಕಾರಿ

(c) ಅತೃಪ್ತಿ (d) ಅಸಮಾಧಾನ

(ಆ) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: **(5 × 1 = 5)**

(ಮನೋರಮೆ, ದ್ವೀಪಜೀವಿಗಳಾಗಿ, ಸಿಂಹಬಾಲದ ಕೋತಿ, ಚೆನ್ನೈ, ಚಹಾ, ಮುದ್ದಣ)

11) ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ..................

12) ಸ್ಥಳೀಯ ಭಾಷೆ ಕಲಿಯದ ಅನ್ಯ ಭಾಷಿಕರು............... ಉಳಿಯುತ್ತಾರೆ.

13) ಕಲಾಂ ಅವರು ರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಅವರು ............ ನಲ್ಲಿದ್ದರು.

14) ಕನ್ನಡವು ಕಸ್ತೂರಿಯಲ್ಲವೇ! ಎಂದವರು ............

15) ಕಲಿಯುಗದ ಅಮೃತ.................

(ಇ) ಹೊಂದಿಸಿ ಬರೆಯಿರಿ: **(5 × 1 = 5)**

| | |
|---|---|
| 16) ಜಾಲಿಯ ಮರದಂತೆ | ಅ) ಟಿ. ಯಲ್ಲಪ್ಪ |
| 17) ಮುಂಬೈ ಜಾತಕ | ಆ) ಸುಕನ್ಯಾ ಮಾರುತಿ |
| 18) ಶಿಲುಬೆ ಏರಿದ್ದಾನೆ | ಇ) ಜಿ.ಎಸ್. ಶಿವರುದ್ರಪ್ಪ |
| 19) ಹತ್ತಿ ... ಚಿತ್ತ ... ಮತ್ತು .... | ಈ) ಕೆ.ಎಸ್. ನಿಸಾರ್ ಅಹಮದ್ |
| 20) ಒಮ್ಮೆ ನಗುತ್ತೇವೆ | ಉ) ಪುರಂದರ ದಾಸರು |
| | ಊ) ಪುಲಿಗೆರೆ ಸೋಮನಾಥ |

## ಆ–ವಿಭಾಗ

II. (ಅ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(3 × 2 = 6)**

21) ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?

22) ಜಾನಪದ ಗರತಿಯ ಪ್ರಕಾರ ಹಡೆದವ್ವನನ್ನು ಯಾವಾಗ ನೆನೆಯಬೇಕು?

23) ಬೆಳಕು ಬೇಟೆಗಾರ ಹೇಗೆ ಬರುತ್ತಾನೆ?

24) ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

(ಆ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(2 × 2 = 4)**

25) ಡಾ।। ಚಂದ್ರಪ್ಪ ಬಸಲಿಂಗನಿಗೆ ಡಾ।। ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

26) ಮಾರ್ಷನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

27) ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?

28) ಪಟ್ಟಣದ ಹೋಟೇಲಿನ ಕಟ್ಟಡ ಹೇಗಿದೆ?

(ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(3 × 2 = 6)**

29) ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದಹಾಗೆ ಎಂದು ನಿರೂಪಕರು ಹೇಳುವುದೇಕೆ?

30) ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?

31) ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?

32) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ–ವಿಭಾಗ

III. (ಅ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(2 × 3 = 6)**

33) ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು.

34) ರಸ್ತೆಯಂಚಿನಲ್ಲೇ ಕೈ ಹಿಡಿದು ನಡೆಸಿದವಳು.

35) ಅಲ್ಲಿಯ ಮಾತು ಅವನಿಗೆ ಸನೇಮಿರ ಬರದು.

(ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

36) ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.

37) ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.

(ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

38) ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.

39) ಈ ಕಂಬದೊಳ್ಗೆ ಏನೋ ಸೇರ್‌ಕೊಂಡಿದೆ.

**ಈ–ವಿಭಾಗ**

IV. (ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿರಿ : **(2 × 4 = 8)**

40) ಪ್ರಮದ ವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

41) ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

42) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.

43) ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಸೋಮನಾಥ ಹೇಗೆ ವಿವರಿಸಿದ್ದಾನೆ?

(ಆ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿರಿ: **(1 × 4 = 4)**

44) ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?

45) ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?

46) ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

(ಇ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ: **(1 × 4 = 4)**

47) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ? ವಿವರಿಸಿ.

48) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ? ವಿವರಿಸಿ.

## ಭಾಷಾಭ್ಯಾಸ

V. (ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ: **(4 × 2 = 8)**

49) ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.

ಗಟ್ಟಿಪಾದ, ಹಿತವಚನ, ಬೆಳ್ಳಿಲೋಟ

50) ಕೆಳಗಿನ ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿ.

ಸೀತೆಯನ್ನು, ಕಾಲೇಜಿನಿಂದ, ಮುಖದಲ್ಲಿ

51) ಕೆಳಗಿನ ಎರಡು ಕ್ರಿಯಾಪದಗಳ ಧಾತು ಗುರುತಿಸಿ.

ಓದುವಳು, ಹಾಡುವನು, ಕುಣಿಯುತ್ತಿತ್ತು.

52) ಎರಡು ಕ್ರಿಯಾಪದಗಳ ಕಾಲವನ್ನು ಸೂಚಿಸಿ.

ಹೋದನು, ಕೇಳುತ್ತಾರೆ, ಕುಣಿಯುವರು.

53) ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.

ದಾರಿದೀಪ, ತಲೆಬಾಗು, ಹಿತ್ತಾಳೆಕಿವಿ.

54) ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

(ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ: **(1 × 4 = 4)**

55) ಮತದಾನದ ಮಹತ್ವ

**ಅಥವಾ**

ಪುಸ್ತಕಗಳ ಮಹತ್ವ

(ಇ) ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ: **(1 × 4 = 4)**

(ಯಾವುದೇ ಪತ್ರ ಲೇಖನದಲ್ಲಿ ಹೆಸರು ನಮೂದಿಸಬಾರದು, ಸಂಕೇತಾಕ್ಷರಗಳನ್ನು ಮಾತ್ರ ಬಳಸಬೇಕು. ಉದಾಹರಣೆಗೆ : ಅ.ಬ.ಕ)

56) ನಿಮಗೆ ಶೈಕ್ಷಣಿಕ ಸಾಲ ಸೌಲಭ್ಯವನ್ನು ಒದಗಿಸುವಂತೆ ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಕಾಲೇಜಿನಲ್ಲಿ ಆಚರಿಸಿದ ವಾರ್ಷಿಕೋತ್ಸವವನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

| ನೋಂದಣಿ ಸಂಖ್ಯೆ : Registration No. : | | | | | | | | | | | |
|---|---|---|---|---|---|---|---|---|---|---|---|

**A1 – 2024**

| ವಿಷಯ ಸಂಕೇತ / Subject Code | 01 (NS) |
|---|---|

# ಕನ್ನಡ / KANNADA

[ಸಮಯ: 3 ಗಂಟೆ 15 ನಿಮಿಷಗಳು] [ಒಟ್ಟು ಪ್ರಶ್ನೆಗಳ ಸಂಖ್ಯೆ : 56] [ಗರಿಷ್ಠ ಅಂಕಗಳು : 80]
[Time : 3 Hours 15 Minutes] [Total No. of questions : 56] [Max. Marks : 80]

ಸೂಚನೆ : "ಅ–ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ – ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10 × 1 = 10)**

1) ಸೀತೆಯನ್ನು ರಾವಣ ಎಲ್ಲಿರಿಸಿದ್ದನು?

(ಅ) ಅಂತಃಪುರದಲ್ಲಿ (ಆ) ಶಾಂತಿ ಜಿನಭವನದಲ್ಲಿ

(ಇ) ಪ್ರಮದವನದಲ್ಲಿ (ಈ) ನಿಜನಿವಾಸದಲ್ಲಿ

2) ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?

(ಅ) ಮರ್ಕಟನ (ಆ) ಅಂಧಕನ

(ಇ) ಹಂದೆಯ (ಈ) ಶರಣನ

P.T.O.

3) ವಲ್ಲಭೆಯೆ ಬರವೇನು ಮುಖದಲಿ
ತಲ್ಲಣವೆ ತಲೆದೋರುತಿದೆ ತಳು
ವಿಲ್ಲದುಸುರಿರುಳೇಕೆ ಬಂದೆ ಲತಾಂಗಿ ಹೇಳೆಂದ. – ಹೀಗೆಂದು
ದ್ರೌಪದಿಯನ್ನು ಪ್ರಶ್ನಿಸಿದವರು ಯಾರು?

(ಅ) ಭೀಮ (ಆ) ಅರ್ಜುನ
(ಇ) ಯಮಸುತ (ಈ) ಕೀಚಕ

4) ಕವಿ ಬೇಂದ್ರೆಯವರ ಪ್ರಕಾರ ಯಾವುದು ಮತ್ತೆ ಚಿಗುರಬಹುದು?

(ಅ) ಬಾನು (ಆ) ನದಿ
(ಇ) ಹರೆಯ (ಈ) ಮರ

5) ಲಕ್ಷ ದಾರಿಗಳ ಚದುರಂಗದಾಟ ಯಾವುದು?

(ಅ) ವಿದ್ಯೆ (ಆ) ಜೀವನ
(ಇ) ರಸ್ತೆಯಂಚು (ಈ) ಕಂಡದ್ದು

6) ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ?

(ಅ) ಕಮಲಮ್ಮ ಟೀಚರ್ (ಆ) ಕೀರ್ತಿ
(ಇ) ಮುದ್ದೇಗೌಡರು (ಈ) ಸೀತಾ

7) "ಇದೆಲ್ಲ ಸಾಕು ಮಾರಾಯ, ಯಾವತ್ತೂ ನಮ್ಮ ಮುಸುರೆ ಪಾತ್ರೆಗಳನ್ನು ನುಂಗದ ಹೊಳೆ ಇವತ್ತು ನನ್ನಪ್ಪ ಮದುವೆಯಲ್ಲಿ ಕೊಟ್ಟ ಬೆಳ್ಳಿ ಲೋಟವನು ನುಂಗಿತನಾ..." – ಎಂದು ದಣಿಪತ್ನಿಯು ಚೀರಿದ್ದರ ಅರ್ಥವೆಂದರೆ ............

(ಅ) ಚಿನ್ನಮ್ಮನ ಕುಟುಂಬವೆ ಬೆಳ್ಳಿ ಲೋಟವನ್ನು ಅಪಹರಿಸಿದೆಯೆಂಬುದು
(ಆ) ನದಿಯ ಬಗ್ಗೆ ದಣಿಪತ್ನಿಗೆ ನಂಬುಗೆಯಿದೆ
(ಇ) ಕುದುಪನ ಕುಟುಂಬವು ಬೆಳ್ಳಿ ಲೋಟವನ್ನು ಅಪಹರಿಸಿಲ್ಲವೆಂಬುದು
(ಈ) ವೆಂಕಪ್ಪಯ್ಯನವರು ಬೆಳ್ಳಿ ಲೋಟವನ್ನು ಹುಡುಕಿಸಿಲ್ಲವೆಂಬುದು

8) ಆನೆಯ ಮಾವುತನ ಹೆಸರೇನು?

(ಅ) ಕೃಷ್ಣೇಗೌಡ (ಆ) ನಾಗರಾಜ

(ಇ) ವೇಲಾಯುಧ (ಈ) ಶಿವೇಗೌಡ

9) ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

(ಅ) ಈ ಆನೆಯಿಂದ ಐದು ಜನರು ಪ್ರಾಣ ಕಳೆದುಕೊಳ್ಳುತ್ತಾರೆ

(ಆ) ಈ ಆನೆಯನ್ನು ಯಾರಿಗೂ ಮಾರಬಾರದು

(ಇ) ಈ ಆನೆಯು ಕಾಡಿಗೆ ಓಡಿ ಹೋಗುತ್ತದೆ

(ಈ) ಈ ಆನೆಯನ್ನು ಕಟ್ಟಿ ಹಾಕಬಾರದು

10) "ಅದೇನ್ಮಾಡುತ್ತಯ್ಯಾ ಆನೆ. ಎಲ್ಲೋ ಕಂಬದ ಮೇಲೆ ಸತ್ತಿರೋ ತಿಪ್ಪಣ್ಣನಿಗೂ, ಎಲ್ಲೋ ಓಡಾಡಿಕೊಂಡಿರೋ ಆನೆಗೂ ಕಟ್ತೀರಲ್ಲಯ್ಯಾ. ಬಾಯಿಲ್ಲದೋರು ಈ ಪ್ರಪಂಚದಲ್ಲಿ ಬದುಕೋಹಂಗೇ ಇಲ್ಲವೇನಯ್ಯಾ?" – ಹೀಗೆಂದು ನಿರೂಪಕರು ದುರ್ಗಪ್ಪನಿಗೆ ಹೇಳಿದ ಮಾತಿನಲ್ಲಿ ವ್ಯಕ್ತವಾಗುವ ಭಾವ ________.

(ಅ) ಆನೆ ಗೌರಿಯ ಬಗೆಗೆ ನಿರೂಪಕರಲ್ಲಿರುವ ಸಹಾನುಭೂತಿ

(ಆ) ದುರ್ಗಪ್ಪನ ಬಗೆಗೆ ಕೋಪ

(ಇ) ವಿದ್ಯುತ್ ಇಲಾಖೆಯ ಬಗ್ಗೆ ಅಸಹನೆ

(ಈ) ಬಾಯಿ ಇರುವವರ ಬಗ್ಗೆ ಅಸಮಾಧಾನ

(ಆ) ಬಿಟ್ಟ ಸ್ಥಳಗಳನ್ನು ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ: **(5 × 1 = 5)**

(ಮನೋರಮೆ, ಡಾ.ಸಿ.ಎನ್.ಆರ್.ರಾವ್, ಕಾರ್ವೆರ್ ಮಾರ್ಷ್, ಇಂದ್ರಭವನ, ಶಿವಸುಬ್ರಮಣ್ಯ ಅಯ್ಯರ್, ಚಂದ್ರಭವನ)

11) ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ ________.

12) ________ ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದರು.

13) ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು ________.

14) 'ಕನ್ನಡವು ಕಸ್ತೂರಿಯಲ್ಲವೆ?' ಎಂದವರು ________.

15) ________ ಎಂಬುದು ಲೇಖಕರು ಹೇಳಿದ ಹಳ್ಳಿಯ ಹೋಟೆಲಿನ ಹೆಸರು.

(ಇ) ಹೊಂದಿಸಿ ಬರೆಯಿರಿ. **(5 × 1 = 5)**

| | 'ಅ' ಪಟ್ಟಿ | | 'ಬ' ಪಟ್ಟಿ |
|---|---|---|---|
| 16) | ಜಾಲಿಯ ಮರದಂತೆ | ಅ) | ಸುಕನ್ಯಾ ಮಾರುತಿ |
| 17) | ಹಬ್ಬಲಿ ಅವರ ರಸಬಳ್ಳಿ | ಆ) | ಟಿ. ಯಲ್ಲಪ್ಪ |
| 18) | ಶಿಲುಬೆ ಏರಿದ್ದಾನೆ | ಇ) | ಪುರಂದರದಾಸರು |
| 19) | ಹತ್ತಿ.....ಚಿತ್ತ.....ಮತ್ತು | ಈ) | ಜಿ.ಎಸ್. ಶಿವರುದ್ರಪ್ಪ |
| 20) | ಒಮ್ಮೆ ನಗುತ್ತೇವೆ | ಉ) | ಕೆ.ಎಸ್. ನಿಸಾರ್ ಅಹಮದ್ |
| | | ಊ) | ಜನಪದ |

## ಆ – ವಿಭಾಗ

II. (ಅ) **ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **(3 × 2 = 6)**

21) ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?

22) ಹಿತ್ತಾಳೆಗಿಂತ ಬಲುಹೀನ ಯಾವುದು?

23) ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನೆಂದು ಹೇಳಿದ್ದಾರೆ?

24) ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

**(ಆ) ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ. **(2 × 2 = 4)**

25) ಡಾ. ಚಂದ್ರಪ್ಪನವರು ಬಸಲಿಂಗನಿಗೆ ಡಾ. ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

26) ಮಾರ್ಷ್‌ನನ್ನು ಕಂಡ ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

27) ಮುದ್ದಣನನ್ನು ಮನೋರಮೆಯು ಹೇಗೆ ಉಪಚರಿಸಿದಳು?

28) ಹಳ್ಳಿಯ ಚಹಾ ಹೋಟೆಲುಗಳು ಹೇಗಿರುತ್ತವೆ?

**(ಇ) ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ. **(3 × 2 = 6)**

29) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ಕಷ್ಟವಾದುದೇಕೆ?

30) ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

31) ನಾಯಿಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

32) ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

## ಇ – ವಿಭಾಗ

III. **(ಅ) ಯಾವುದಾದರೂ ಎರಡು** ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ. **(2 × 3 = 6)**

33) ಯಮಸುತಂಗರುಹುವೆನೆ-ಧರ್ಮಕ್ಷಮೆಯ ಗರ ಹೊಡೆದಿಹುದು.

34) ಕುಳಿತು ಕೆಮ್ಮುವ ಪ್ರಾಣಿ.

35) "ಎಷ್ಟು ಸಲವಮ್ಮ ಹೇಳುವುದು ನಿನಗೆ?"

**(ಆ) ಯಾವುದಾದರೂ ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ. **(1 × 3 = 3)**

36) ನಮ್ಮ ಭಾಷೆಯಲ್ಲಿ ಓದಿದ್ದೆ ಮೈಗೆ ಹತ್ತುವುದು.

37) ನೀನು ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯೆ?

**(ಇ) ಯಾವುದಾದರೂ ಒಂದು** ವಾಕ್ಯದ ಸಂದರ್ಭವನ್ನು ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ. **(1 × 3 = 3)**

38) ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.

39) ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

## ಈ – ವಿಭಾಗ

IV. **(ಅ) ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಐದು–ಆರು** ವಾಕ್ಯಗಳಲ್ಲಿ ಉತ್ತರಿಸಿರಿ. **(2 × 4 = 8)**

40) ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

41) ರಕ್ಷಿಸಬೇಕಾದವರೆ ಭಕ್ಷಕರಾದಾಗ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

42) ದ್ರೌಪದಿಯು ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

43) ಜ್ಞಾನವನ್ನು ಹೊಂದುವ ಮಾರ್ಗಗಳು ಯಾವುವೆಂಬುದನ್ನು ಕವಿ ಸೋಮನಾಥ ಹೇಗೆ ವಿವರಿಸಿದ್ದಾನೆ?

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.** **(1 × 4 = 4)**

44) ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳಾವುವು?

45) ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ?

46) ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.** **(1 × 4 = 4)**

47) ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ?

48) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಆನೆ ಕಾರಣವೇ? ವಿವರಿಸಿ.

## ಭಾಷಾಭ್ಯಾಸ

V. (ಅ) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಸೂಚನೆಗನುಗುಣವಾಗಿ ಉತ್ತರಿಸಿರಿ. **(4 × 2 = 8)**

49) ಕೆಳಗಿನ ಎರಡು ಪದಗಳ ಗುಣವಾಚಕಗಳನ್ನು ಗುರುತಿಸಿ, ಬರೆಯಿರಿ.

ಹುಸಿನಿದ್ದೆ, ಗಟ್ಟಿಪಾದ, ಬೆಳ್ಳಿಲೋಟ

50) ಕೆಳಗಿನ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.

ಬಲ್ಲವರಿಂದ, ಮೊಮ್ಮಗಳನ್ನು, ತಿಮ್ಮಪ್ಪನವರಲ್ಲಿ

51) ಕೆಳಗಿನ ಎರಡು ಪದಗಳ 'ಧಾತು' ಗುರುತಿಸಿ.

ನಲಿಯುತ್ತ, ಓಡುವರು, ಬರೆಯುವರು

52) ಕೆಳಗಿನ ಎರಡು ಪದಗಳ ಕಾಲವನ್ನು ಸೂಚಿಸಿ.

ಹೋದನು, ಕೇಳುತ್ತಾರೆ, ಕುಣಿಯುವರು

53) ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ದಾರಿದೀಪ, ತಲೆಬಾಗು, ಮೊರೆಹೋಗು

54) ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

**(ಆ) ಯಾವುದಾದರೂ ಒಂದು** ವಿಷಯವನ್ನು ಕುರಿತು ಪ್ರಬಂಧ ರಚಿಸಿ. **(1 × 4 = 4)**

55) ಪುಸ್ತಕಗಳ ಮಹತ್ವ.

**ಅಥವಾ**

ಮೂಢನಂಬಿಕೆಗಳು.

**(ಇ) ಯಾವುದಾದರೂ ಒಂದು** ವಿಷಯವನ್ನು ಕುರಿತು ಪತ್ರ ಬರೆಯಿರಿ. **(1 × 4 = 4)**

**(ಸೂಚನೆ :** ಪತ್ರಲೇಖನದಲ್ಲಿ ಹೆಸರು ನಮೂದಿಸದೆ ಸಂಕೇತಾಕ್ಷರಗಳನ್ನು ಬಳಸಬೇಕು. ಉದಾ: ಅ.ಬ.ಕ. ಇತ್ಯಾದಿ)

56) ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಕಾಲೇಜಿನ ಪ್ರಾಚಾರ್ಯರಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಆಹ್ವಾನಿಸಿ ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.